ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ-2016
ಬೆಲೆ ರೂ. 1




## ಸಂಘದ ವಾರ್ಷಿಕೋತ್ಸವ ಸಂಭ್ರಮ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 8
ಮೇ 2016, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
9958807225
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟೀಲ್
9650182413
ಬಾಬುರಾಜ್ ಪೂಜಾರಿ
9818807696
ಎಸ್. ಪರಮೇಶ್
9015332380
ತ್ಯಾಗೇಶ್ ಮೂರ್ತಿ
9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ನೇರ ಮಾತು

ಕರ್ನಾಟಕದ ವಿವಿಧ ಪ್ರದೇಶಗಳ ಆಹಾರ ವೈವಿಧ್ಯಗಳು ರಾಜ್ಯದ ಜನರಿಗೆ ಮಾತ್ರವಲ್ಲ ರಾಜ್ಯಕ್ಕೆ ಆಗಮಿಸುವ ಹೊರನಾಡಿನವರಿಗೂ ಪ್ರಿಯವಾಗಿರುತ್ತದೆ. ಕರ್ನಾಟಕ ಮೂಲದ ವ್ಯಕ್ತಿಗಳು ಶತಮಾನಗಳಿಂದಲೂ ಹೊರರಾಜ್ಯ ಮತ್ತು ಹೊರದೇಶಗಳಲ್ಲಿ ಹೋಟೇಲ್ ಉದ್ಯಮವನ್ನು ಸ್ಥಾಪಿಸಿ ಬೆಳೆಸಿದ್ದಾರೆ. ಮುಂಬಯಿ, ಚೆನ್ನೈ, ಗುಜರಾತ್, ದೆಹಲಿ, ಉತ್ತರ ಭಾರತದ ಪ್ರವಾಸೀ ಕೇಂದ್ರಗಳು ಸೇರಿದಂತೆ ಭಾರತದಾದ್ಯಂತ ಕರ್ನಾಟಕದ ಇಡ್ಲಿ, ದೋಸೆ ಸೇರಿದಂತೆ ಇತರೆಲ್ಲಾ ತಿಂಡಿ ಪದಾರ್ಥಗಳಿಗೂ ಬೇಡಿಕೆಯಿದೆ. ಅದರಂತೆ ಕನ್ನಡಿಗರು ಗಲ್ಫ್ ದೇಶ, ಯುರೋಪ್, ಅಮೇರಿಕಾಗಳಲ್ಲೂ ಹೋಟೇಲ್ ಉದ್ಯಮದಲ್ಲಿ ತೊಡಗಿದ್ದರೆ. ಈಗಾಗಲೇ ಜಗತ್ತಿನ ಮೂಲೆ ಮೂಲೆಗಳಲ್ಲಿ ಉಡುಪಿ, ಕಾಮತ್, ವುಡ್‌ಲ್ಯಾಂಡ್ಸ್, ದಾಸಪ್ರಕಾಶ್ ಹೋಟೆಲುಗಳು, ಅಯ್ಯಂಗಾರ್ ಬೇಕರಿಗಳು, ಖಾನಾವಳಿಗಳು ಹೆಸರುವಾಸಿಯಾಗಿವೆ.

ದೇಶದ ರಾಜಧಾನಿ ದೆಹಲಿಯಲ್ಲಿ ಈಗಾಗಲೇ ಮನೆಮಾತಾಗಿರುವ ದಕ್ಷಿಣ ಭಾರತದ ಊಟೋಪಚಾರಗಳ ಹೋಟೇಲುಗಳು ಬಹಳಷ್ಟಿವೆ. ಕಳೆದ ಶತಮಾನದಿಂದ ನಡೆದುಕೊಂಡು ಬರುತ್ತಿದ್ದು ಈಗ ಬಾಗಿಲು ಮುಚ್ಚಿರುವ ಇಲ್ಲಿನ ಮದ್ರಾಸ್ ಹೋಟೇಲ್ ಕೂಡಾ ಕನ್ನಡಿಗರದ್ದೇ. ನಂತರ ಇಲ್ಲಿ ಸಾಗರ್ ರತ್ನಾ ಹೆಸರು ದಕ್ಷಿಣಭಾರತೀಯ ಊಟೋಪಚಾರಕ್ಕೆ ಹೆಸರುವಾಸಿಯಾಯಿತು. ದೆಹಲಿ ಕರ್ನಾಟಕ ಸಂಘದ ಕರ್ನಾಟಕ ಫುಡ್ ಸೆಂಟರ್ ಕೂಡಾ ದೆಹಲಿಯಲ್ಲಿರುವ ಸ್ಥಳೀಯರಿಗೆ ದಕ್ಷಿಣಭಾರತದ ತಿಂಡಿತಿನಸುಗಳಿಗೆ ಹೆಸರಾಗಿದೆ.

ದೇಶದ ರಾಜಧಾನಿಯಲ್ಲಿರುವ ಹಲವು ರಾಜ್ಯಗಳ ಭವನಗಳು ಕೂಡಾ ತಮ್ಮ ತಮ್ಮ ರಾಜ್ಯಗಳ ಆಹಾರಗಳಿಗೆ ಹೆಸರುವಾಸಿಯಾಗಿವೆ. ಮುಖ್ಯವಾಗಿ ಆಂಧ್ರ ಭವನ, ಮಹಾರಾಷ್ಟ್ರ ಭವನ, ಗುಜರಾತ್ ಭವನಗಳು ಆಯಾಯ ಪ್ರಾಂತ್ಯಗಳ ಆಹಾರ ವೈವಿಧ್ಯಗಳಿಂದ ಜನರನ್ನು ಆಕರ್ಷಿಸುತ್ತವೆ. ಆದರೆ ಕರ್ನಾಟಕದ ಮೂರು ಭವನಗಳಿದ್ದರೂ ಇಲ್ಲಿ ಸಾರ್ವಜನಿಕರಿಗೆ ಕರ್ನಾಟಕದ ಊಟೋಪಚಾರಗಳು ಲಭ್ಯವಿಲ್ಲ. ಕರ್ನಾಟಕದ ತಿಂಡಿ–ತಿನಸುಗಳ ಬೇಡಿಕೆಯನ್ನು ಗಮನಿಸಿದರೆ ಕರ್ನಾಟಕದ ಭವನಗಳೂ ತಮ್ಮ ಕ್ಯಾಂಟಿನ್‌ಗಳನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಬಹುದು. ಈ ನಿಟ್ಟಿನಲ್ಲಿ ಬೇಕಾದ ನಿಯಮಾವಳಿಗಳ ಬದಲಾವಣೆ ಇತ್ಯಾದಿಯನ್ನು ಸರಕಾರದ ವರಿಷ್ಟ ಅಧಿಕಾರಿಗಳು ತೆಗೆದುಕೊಂಡು ದೆಹಲಿಯಲ್ಲಿ ಕರ್ನಾಟಕದ ಆಹಾರ ವೈವಿಧ್ಯಗಳು ದೇಶ ವಿದೇಶದ ಜನರಿಗೆ ದೊರಕುವಂತೆ ಮಾಡಬಹುದು. ಇದು ಕರ್ನಾಟಕದ ಆಹಾರ ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಪಸರಿಸಲು ಸಹಾಯವಾಗಬಹುದು.

ಸಂಘದ ಸಕ್ರಿಯ ಮತ್ತು ಯುವ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಕನ್ನಡ ಕ್ಷೇತ್ರಕ್ಕೆ ಸಲ್ಲಿಸಿದ ಅಪೂರ್ವ ಸೇವೆಗಾಗಿ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಕೊಟ್ಟಿರುವುದು ಸಂಘಕ್ಕೆ ಹೆಮ್ಮೆಯ ಸಂಗತಿ. ಸಾರ್ವಜನಿಕ ಆಡಳಿತ ಮತ್ತು ಜನಸಮುದಾಯಗಳ ಸಂಘಟನೆಗಳಲ್ಲಿ ಕ್ರಿಯಾಶೀಲರಾಗಿ ದುಡಿಯುತ್ತಿರುವ ನಾಗರಾಜ ಅವರು ಕರ್ನಾಟಕದ ಮತ್ತು ದೇಶದ ಉತ್ತಮ ನಾಯಕನಾಗಿ ಮೂಡಿಬರಲಿ ಎಂದು ಹಾರೈಸುವೆನು. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಅಭಿಮತ ರಸಪ್ರಶ್ನೆ

1. 'ಜೋಗಿಯ ರಾಣಿ' ನಾಟಕದ ರಚನಾಕಾರರು ಯಾರು?
2. ಸಂಘದಲ್ಲಿ ಪ್ರದರ್ಶನಗೊಂಡ ಇಬ್ಬರು ಮಹಾಕವಿಗಳ ಕುರಿತಾದ ನಾಟಕಗಳು ಯಾವುವು?
3. ದೆಹಲಿಯಲ್ಲಿ ಕನ್ನಡ ಚಲನಚಿತ್ರೋತ್ಸವ ಯಾವ ಸಭಾಂಗಣದಲ್ಲಿ ನಡೆಯಿತು?
4. ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳು ಯಾರು?
5. ಹೊರನಾಡ ಸಾಂಸ್ಕೃತಿಕ ಉತ್ಸವ ಎಲ್ಲೆಲ್ಲಿ ನಡೆಯಿತು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.05.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಏಪ್ರಿಲ್ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ** 1. ಶ್ರೀಮತಿ ಮಂಜುಳಾ ಮಾನಸ 2. ಶ್ರೀ ಶೇಖರ್ ಎನ್. ಬಂಗೇರಾ 3. ಶ್ರೀಮತಿ ಮೈಥಿಲಿ ಅತ್ತಾವರ 4. ತೋನ್ಸೆ ವಿಜಯ ಕುಮಾರ್ ಶೆಟ್ಟಿ ಮತ್ತು ಪ್ರೊ. ಮುಜಾಫರ್ ಅಸಾದಿ 5. ಶ್ರೀ ಪಿ.ಕೆ. ಯಶವಂತ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀಮತಿ ಶಾರದಾ ಮಲ್ಲನಗೌಡ ಎಸ್, ಶ್ರೀಮತಿ ಪ್ರೇಮಲತಾ, ಶ್ರೀಮತಿ ಸೌಮ್ಯ ಕೊಟ್ರೇಶ್, ಶ್ರೀಮತಿ ಶಾಲಿನಿ ವಿ. ನಾಯಕ್, ಕು. ಸಿಂಚನಾ ಮೂರ್ತಿ
ಶ್ರೀ ಮಹೇಂದ್ರ ಎಚ್, ಶ್ರೀ ಪಿ.ವಿ. ನಾಯಕ್
ಶ್ರೀ ಭರತ್‌ಕುಮಾರ್ ಎನ್.ಎಂ.

## ಮುನ್ನೋಟ

ಪ್ರಿಯ ಸದಸ್ಯರುಗಳೇ,

ದೆಹಲಿ ಕರ್ನಾಟಕ ಸಂಘವು ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಜೊತೆಗೆ ಕೆಲವು ಸಂಘ ಸಂಸ್ಥೆಗಳು ಸಹ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಮಾಡುತ್ತಿವೆ. ನಾಡಪ್ರಭು ಕೆಂಪೇಗೌಡ ಫೌಂಡೇಷನ್(ರಿ) ದೆಹಲಿ ಹೊಸ ಸಂಸ್ಥೆ ಪ್ರಾರಂಭವಾಗಿದೆ. ಇದರ ಮುಖ್ಯ ಧ್ಯೇಯ ಸಾಂಸ್ಕೃತಿಕ ಹಾಗೂ ಆಟೋಟಗಳ ಆಯೋಜನೆಯ ಜೊತೆಗೆ ಬಡಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು, ಈ ಸಂಸ್ಥೆಯ ಅಧ್ಯಕ್ಷರು ಶ್ರೀ ಬಿ.ಎಲ್. ಸುರೇಶ್ ಹಾಗೂ ನಿರ್ದೇಶಕರುಗಳು ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಕೆಲವು ನ್ಯಾಯಾಧೀಶರುಗಳನ್ನು ಒಳಗೊಂಡಿದೆ. ಈ ಸಂಸ್ಥೆಯನ್ನು ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು, ಆದಿಚುಂಚನಗಿರಿ ಮಹಾಸಂಸ್ಥಾನ ಅಧ್ಯಕ್ಷರು ಹಾಗೂ ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್‌ರವರು ಲೋಕಾರ್ಪಣೆ ಮಾಡಿದ್ದಾರೆ. ಇದರಿಂದ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಕ್ಕೆ ಹೆಚ್ಚು ಬಲ ಬರಲಿದೆ ಎಂದು ಹಾರೈಸಿದ್ದಾರೆ. ಜೊತೆಗೆ ದೆಹಲಿಯ ಫಿಕ್ಕಿ ಸಭಾಂಗಣದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರ ಶೂನ್ಯಪೀಠಾರೋಹಣದ ಬೆಳ್ಳಿಹಬ್ಬ ಸಮಾರಂಭ ಹಾಗೂ ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಏಪ್ರಿಲ್ 24 ರಂದು ಗುರ್‌ಗಾಂವ್ ನಲ್ಲಿ ಗುರುಗಾಂ ಕನ್ನಡ ಸಂಘದಲ್ಲಿ ಮತ್ತು ಏಪ್ರಿಲ್ 30 ಮತ್ತು ಮೇ 1ರಂದು ದೆಹಲಿ ಕರ್ನಾಟಕ ಸಂಘದಲ್ಲಿ 'ಹೊರನಾಡ ಉತ್ಸವ' ಕಾರ್ಯಕ್ರಮವು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕರ್ನಾಟಕದ ಹಳ್ಳಿಗಳಿಂದ ಹಾಗೂ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಬಂದ ಹಿಂದುಳಿದ ವರ್ಗದ ಸುಮಾರು 150ಕ್ಕೂ ಹೆಚ್ಚು ಕಲಾವಿದರು ಬಂದು ಕಾರ್ಯಕ್ರಮ ನೀಡಿ ದೆಹಲಿ ಕನ್ನಡಿಗರ ಮನಗೆದ್ದಿದ್ದಾರೆ. ಈ ಕಾರ್ಯಕ್ರಮಕ್ಕೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಾದ ಶ್ರೀ ಅಶೋಕ್ ಚಲವಾದಿ, ಶ್ರೀ ಬಲವಂತ ರಾವ್ ಪಾಟೀಲ್ ಮತ್ತು ಶ್ರೀ ರಾಜೇಂದ್ರ ಪ್ರಸಾದ್ ಅವರಿಗೆ ಸಂಘದ ಪರವಾಗಿ ಧನ್ಯವಾದಗಳು.

ಈ ಬಾರಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಕನ್ನಡಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ 'ಕೆಂಪೇಗೌಡ ಪ್ರಶಸ್ತಿ'ಯನ್ನು ನನಗೆ ನೀಡಿ ಗೌರವಿಸಿದ್ದಾರೆ. ಈ ಪ್ರಶಸ್ತಿಯನ್ನು ತಮ್ಮೆಲ್ಲರ ಪರವಾಗಿ ನಾನು ಸ್ವೀಕರಿಸಿರುತ್ತೇನೆ. ಈ ಪ್ರಶಸ್ತಿಯಿಂದ ಜವಾಬ್ದಾರಿ ಇನ್ನೂ ಹೆಚ್ಚಾದಂತಾಗಿದೆ. ತಮ್ಮೆಲ್ಲರ ಸಹಕಾರದಿಂದ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡವನ್ನು ಇನ್ನಷ್ಟು ಬಲಿಷ್ಠಗೊಳಿಸೋಣ ಎಂಬ ಆಶಯದೊಂದಿಗೆ, ಧನ್ಯವಾದಗಳು. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**14 ಮೇ 2016** ಶನಿವಾರ, ಸಂಜೆ 5.00 ಗಂಟೆಗೆ



**ಬಸವಣ್ಣ** ಮತ್ತು **ಅಕ್ಕ** ಜಯಂತಿ ಆಚರಣೆ



**15 ಮೇ 2016** ಭಾನುವಾರ, ಸಂಜೆ 5.00 ಗಂಟೆಗೆ

ದೆಹಲಿ ಕರ್ನಾಟಕ ಸಂಘ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಇವರ ಸಹಯೋಗದಲ್ಲಿ ಸಂಘದ ಕಲಾವಿದರು ಅಭಿನಯಿಸುವ ನಾಟಕ **'ಜೋಗಿಯ ರಾಣಿ'**, ರಚನೆ : ನಾಗರಾಜ ಕೋಟೆ, **ನಿರ್ದೇಶನ :** ಬಾಲಕೃಷ್ಣ ನಾಯ್ಕ ಡಿ

**29 ಮೇ 2016** ಭಾನುವಾರ, ಸಂಜೆ 5.00 ಗಂಟೆಗೆ

ಡಾ. ವೈ ಅವನೀಂದ್ರನಾಥ್ ರಾವ್ ಅವರ 'ಸಂಸ್ಕೃತಿ ಸಂವೇದ' ವಿಮರ್ಶಾ ಲೇಖನಗಳ ಕೃತಿ ಬಿಡುಗಡೆ

### ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರಕಲಾ ಪ್ರದರ್ಶನ

**14 ರಿಂದ 16 ಮೇ 2016**

ಶ್ರೀ ಎಂ.ಎನ್. ನರಸಿಂಹ ಮೂರ್ತಿ, ತುಮಕೂರು ಇವರಿಂದ ಚಿತ್ರಕಲಾ ಪ್ರದರ್ಶನ

## ಅರ್ಜಿಗಳ ಆಹ್ವಾನ

ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದಲ್ಲಿ ಎರಡು ಹುದ್ದೆಗಳಿಗೆ ಅರ್ಜಿಗಳನ್ನು ಕರೆಯಲಾಗಿದೆ.
ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಕಚೇರಿ ಸಹಾಯಕ ಮತ್ತು ಸಂಶೋಧನಾ ಸಹಾಯಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ– ಮೇ 31, 2016.
ವಿವರಗಳಿಗೆ ನೋಡಿರಿ:
http://www.jnu.ac.in/Career/currentjobs.htm

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಮೇ, 2016ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಮೇ 2016ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 29 ಮೇ, 2016ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 29 ಮೇ, 2016ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818



ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 26 ಸಂಚಿಕೆ 8
ಮೇ 2016

**ಅಭಿಮತ ಪ್ರಧಾನ ಸಂಪಾದಕರು**
ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**
ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

## ಸಂಪಾದಕೀಯ

# ಪ್ರಕೃತಿಯ ವಿಕೋಪ

ವೈಶಾಖದ ಬಿಸಿಲಿಗೆ ಮತ್ತೊಮ್ಮೆ ನಾವು ತೆರೆದುಕೊಂಡಿದ್ದೇವೆ. ಮೇ–ಜೂನ್–ಜುಲೈ ತಿಂಗಳುಗಳ ವಿಪರೀತ ಬಿಸಿಲು ದೆಹಲಿ ಸೇರಿದಂತೆ ಉತ್ತರ ಭಾರತದಲ್ಲಿ ಅತೀವವಾಗಿ ಕಾಡುವುದು ಪ್ರತಿವರ್ಷದ ರೂಢಿ. ಮೇ ತಿಂಗಳ ಬೇಸಿಗೆ ರಜೆ ಮಕ್ಕಳಿಗೆ ಈ ಸಲ ಸ್ವಲ್ಪ ಬೇಗನೆ ದೊರೆತಂತಿದೆ. ಇಲ್ಲಿ ವಿಪರೀತ ಬಿಸಿಲೆಂದು ಊರಿಗೆ ಹೊರಡುವ ದೆಹಲಿಯ ಕನ್ನಡ ಕುಟುಂಬಗಳಿಗೆ ಊರಲ್ಲೂ ತಂಪು ದೊರಕುವುದು ಗ್ಯಾರಂಟಿಯಲ್ಲ. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ನೀರಿನ ಅಭಾವ ವಿಪರೀತವಾಗಿದೆ. ನಿತ್ಯ ಹರಿಯುವ ನದಿಗಳು ಕೂಡಾ ಈ ಸಲ ಬತ್ತಿ ಹೋಗಿವೆ. ಅಂತರ್ಜಲ ಕಡಿಮೆಯಾಗಿ ಬಾವಿ, ಕೆರೆ, ಬೋರ್‌ವೆಲ್‌ಗಳಲ್ಲಿ ಕೂಡಾ ನೀರಿಲ್ಲ. ಕರ್ನಾಟಕದ ಬಯಲು ಸೀಮೆಯಾಗಲೀ, ಮಲೆನಾಡಾಗಲೀ ಅಥವಾ ಕಡಲ ಕರೆಯ ಕರಾವಳಿಯೇ ಆಗಲಿ ನೀರಿನ ಬರ ಎಲ್ಲರನ್ನೂ ಕಾಡುತ್ತಿದೆ. ಇನ್ನು ಬೆಂಗಳೂರು ಮಂಗಳೂರಿನಂತಹ ನಗರಗಳಲ್ಲಿ ನೀರಿನ ಸರಬರಾಜು ಕಡಿಮೆಯಾಗಿ ನಾಗರಿಕರು ನೀರಿಗಾಗಿ ಪರದಾಡುವ ಸ್ಥಿತಿ ಬಂದಿದೆ. ಮೇ–ಜೂನ್ ತಿಂಗಳುಗಳಲ್ಲಿ ಬರಬೇಕಾಗಿರುವ ಮಳೆಯು ಸಮಯದಲ್ಲಿ ಬರುವುದೇ ಎಂಬ ಅಳುಕು ಎಲ್ಲರಲ್ಲಿದೆ. ಇದಕ್ಕೆಲ್ಲ ಕಾರಣ ನಾವೇ ಎಂದು ಎಲ್ಲರೂ ಹೇಳಿಕೊಂಡರೂ ಅದರ ಪರಿಹಾರಕ್ಕಾಗಿ ಕೆಲಸ ಮಾಡುವವರ ಸಂಖ್ಯೆಯೇನೂ ದೊಡ್ಡದಿಲ್ಲ.

ಹವಾಮಾನ ಬದಲಾವಣೆಯ ನೇರ ಪರಿಣಾಮವೋ ಎನ್ನುವಂತೆ ದೇಶದ ಬಹುತೇಕ ಪ್ರದೇಶಗಳು ಬರಪೀಡಿತವಾಗಿದ್ದರೆ, ಹಿಮಾಲಯದ ತಪ್ಪಲಲ್ಲಿರುವ ಉತ್ತರಖಾಂಡ ರಾಜ್ಯದಲ್ಲಿ ಈ ವರ್ಷ ಎಂದೂ ಕಾಣಿರದಂತಹ ಕಾಳ್ಗಿಚ್ಚು ಹಸಿರು ಕಾಡನ್ನು ಸುಟ್ಟು ಹಾಕಿದೆ. ಸುಮಾರು 2,500 ಹೆಕ್ಟೇರ್ ವಿಸ್ತಾರವಾದ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ಪಸರಿಸಿದಾಗ ಅದನ್ನು ನಿಯಂತ್ರಿಸುವುದು ಅಷ್ಟೇನು ಸುಲಭದ ಕೆಲಸವಲ್ಲ. ಬೆಂಕಿ ಹಚ್ಚಿಕೊಂಡೊಡನೆ ಮಳೆ ಬಂದರೆ ನೈಸರ್ಗಿಕವಾಗಿ ಬೆಂಕಿ ನಂದಬಹುದು. ಆದರೆ ಮಳೆಯ ಸುಳಿವು ಇನ್ನೂ ಇಲ್ಲ. ಈ ಕಾಳ್ಗಿಚ್ಚಿನಿಂದ ಹಿಮಾಲಯದ ಅಂಚಿನ ಪರಿಸರದ ಮೇಲೆ ಪರಿಣಾಮ ಮಾತ್ರವಲ್ಲದೇ ಹಾಗೂ ರಾಜ್ಯದ ಆರ್ಥಿಕತೆಯ ಮೇಲೂ ಭಾರಿ ಹೊಡೆತ ಬಿದ್ದಿದೆ. ಸಸ್ಯ ಸಂಪತ್ತು ಮಾತ್ರವಲ್ಲದೇ ವನ್ಯಪ್ರಾಣಿಗಳು, ಸರೀಸೃಪಗಳು ಸೇರಿದಂತೆ ಪ್ರಾಣಿ ಸಂಪತ್ತೂ ಈ ಕಾಳ್ಗಿಚ್ಚಿಗೆ ಆಹುತಿಯಾಗಿವೆ. ಉರಿ ಬಿಸಿಲಿಗೆ ಕಾಳ್ಗಿಚ್ಚು ಪಸರಿಸುವುದು ಬಹುತೇಕ ಎಲ್ಲಾ ಕಾಡುಗಳಲ್ಲು ಸಂಭವಿಸುತ್ತದೆ. ಹಸಿರಾಗಿ ಮಲಗಿದ್ದ ಅರಣ್ಯವನ್ನು ಬೆಂಕಿಯ ಕೆನ್ನಾಲಿಗೆ ದಹಿಸುವುದು ಪರಿಸರದಲ್ಲಿ ಇನ್ನಷ್ಟು ಏರುಪೇರುಗಳನ್ನು ಮಾಡುವ ಸಾಧ್ಯತೆಗಳೇ ಹೆಚ್ಚು. ಉರಿಯುವ ಬೆಂಕಿ ಹಸಿರನ್ನು ನಾಶ ಮಾಡುತ್ತಿರುವಂತೆ ಹೊಮ್ಮುವ ಹೊಗೆಯು ವಾಯು ಮಾಲಿನ್ಯವನ್ನು ಹೆಚ್ಚು ಮಾಡುತ್ತದೆ.

ಉತ್ತರಖಾಂಡದ ಕಾಳ್ಗಿಚ್ಚಿನಂತೆಯೇ ಮುಂಬಯಿ ಮತ್ತು ದೆಹಲಿಯಂತಹ ಮಹಾನಗರಗಳ ಹೊರವಲಯಗಳಲ್ಲಿ ಕಸದರಾಶಿಗೆ ಬೆಂಕಿ ಬಿದ್ದು ಸಾಮಾನ್ಯ ಜನರು ಮಾಲಿನ್ಯ ತುಂಬಿದ ಗಾಳಿಯನ್ನು ಉಸಿರಾಡುವಂತಹ ಪರಿಸ್ಥಿತಿಯೂ ಬಂದಿದೆ. ದೆಹಲಿ ಸರಕಾರವು ಎಪ್ರಿಲ್ 15ರಿಂದ ನಡೆಸಿದ ಆಡ್–ಈವನ್ ವಾಹನ ನಿಯಂತ್ರಣದಿಂದ ಪರಿಸರದ ಮೇಲೆ ಯಾವುದೇ ಗಂಭೀರವಾದ ಉತಮ ಪರಿಣಾಮ ಕಂಡು ಬರದೇ ಇರಲು ಕಸದ ರಾಶಿಯ ಬೆಂಕಿಯಿಂದ ಹೊಮ್ಮಿದ ದಟ್ಟಹೊಗೆಯೇ ಕಾರಣ ಎನ್ನಲಾಗಿದೆ. ಪ್ರಕೃತಿದತ್ತವಾಗಿ ಸಿಗುತ್ತಿರುವ ನೀರು ಮತ್ತು ಗಾಳಿಯ ಮೇಲೆ ಮನುಷ್ಯರು ಸೇರಿದಂತೆ ಎಲ್ಲಾ ಜೀವಿಗಳಿಗೂ ಹಕ್ಕಿದೆ. ಪರಿಸರವನ್ನು ಕೆಡದಂತೆ ರಕ್ಷಿಸುವ ಜವಾಬ್ದಾರಿಯು ನಮ್ಮ ಮೇಲಿದೆ. ದಿನ ಕಳೆದಂತೆ ಪ್ರಾಕೃತಿಕ ವಿಕೋಪಗಳು ಹೆಚ್ಚಾಗುತ್ತಿವೆ. ಉತ್ಪಾದನೆಯ ಅಭಿವೃದ್ಧಿ ಪಥದತ್ತ ಸಾಗುತ್ತಾ ಮನುಷ್ಯನು ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ನಮ್ಮ ಮುಂದಿನ ತಲೆಮಾರಿನವರಾದ ನಮ್ಮ ಮಕ್ಕಳಿಗೆ ಈ ಬೇಸಿಗೆಯ ರಜಾದಿನಗಳಲ್ಲಿ ಪ್ರಕೃತಿಯನ್ನು ಅನುಭವಿಸಿ ಅದರ ಮಹತ್ವವನ್ನು ಅರಿಯುವಂತಹ ಕೆಲಸಗಳನ್ನು ನಾವೆಲ್ಲ ಮಾಡಬೇಕಾಗಿದೆ. ಅ

ಬಾಲಕೃಷ್ಣ ನಾಯ್ಕ್ ಡಿ.



ರಾಷ್ಟ್ರಪತಿಗಳಿಂದ 'ಪದ್ಮಶ್ರೀ' ಪ್ರಶಸ್ತಿ ಸ್ವೀಕರಿಸುತ್ತಿರುವ ಖ್ಯಾತ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಪಂಡಿತ ವೆಂಕಟೇಶ ಕುಮಾರ್



ರಾಷ್ಟ್ರಪತಿಗಳಿಂದ 'ಪದ್ಮಶ್ರೀ' ಪ್ರಶಸ್ತಿ ಸ್ವೀಕರಿಸುತ್ತಿರುವ ಖ್ಯಾತ ಭರತನಾಟ್ಯ ಕಲಾವಿದೆ ಶ್ರೀಮತಿ ಪ್ರತಿಭಾ ಪ್ರಹ್ಲಾದ್

# ಸಿ.ಎಂ. ನಾಗರಾಜ್ ಸಾಧನೆಗೆ 'ನಾಡಪ್ರಭು' ಗೌರವ

ಗುಪ್ತಚರ ಇಲಾಖೆಯಲ್ಲಿ ಸೇವೆಯಲ್ಲಿದ್ದ ಬೀಚಿಯವರು ತಮ್ಮ ವಿಶಿಷ್ಟ ಬರಹಗಳ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಬೆಳಗಿದರು. ಅರಕ್ಷಣ ಇಲಾಖೆಯಲ್ಲಿರುವ ಹಲವರು ರಂಗಭೂಮಿಯಲ್ಲಿ ತೊಡಗಿದ ಉದಾಹರಣೆ ಇದೆ. ಆದರೆ ನಾಗರಿಕ ರಕ್ಷಣೆಯಲ್ಲಿ ತೊಡಗಿರುವ ಪೋಲೀಸರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟನೆ ನಡೆಸುವುದು ಸುಲಭದ ಮಾತಲ್ಲ. ಇದು ಸಾಧ್ಯ ಅಂತ ಸಾಧಿಸಿ ತೋರಿಸಿದವರು ಸಿ.ಎಂ. ನಾಗರಾಜ ಅವರು.

ದೆಹಲಿ ಪೋಲಿಸ್‌ನಲ್ಲಿ ಎರಡು ದಶಕಗಳಿಂದ ಸೇವೆಯಲ್ಲಿರುವ ಮೂಲತಃ ಕೋಲಾರ ಜಿಲ್ಲೆಯ ಚವರಮಂಗಲ ಮುನಿವೆಂಕಟೇಗೌಡ ನಾಗರಾಜ್ ಅವರು ಸದ್ಯ ಪ್ರಧಾನಿಯವರ ಆಪ್ತ ರಕ್ಷಣಾ ಸಿಬ್ಬಂದಿ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಮೂಹ ಮಾಧ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇದೀಗ ದೆಹಲಿ ಕನ್ನಡ ಸೇವಾ ಕ್ಷೇತ್ರದಲ್ಲಿ ಸಲ್ಲಿಸಿದ ಕೊಡುಗೆಗಾಗಿ ಅವರಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ನೀಡುವ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಅರ್ಹವಾಗಿ ಸಂದಿದೆ. ಅವರು ದಿನಾಂಕ 22.04.2016ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಈ ಪುರಸ್ಕಾರ ಸ್ವೀಕರಿಸಿದ್ದಾರೆ.

ರಾಜಧಾನಿಯ ಪ್ರತಿಷ್ಠಿತ ದೆಹಲಿ ಕರ್ನಾಟಕ ಸಂಘಕ್ಕೆ ಮೂರು ಬಾರಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ನಾಗರಾಜ್ ದಶಕಕ್ಕೂ ಹೆಚ್ಚು ಕಾಲ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಆ ಮೂಲಕ ಇಲ್ಲಿ ನಡೆದ ನೂರಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯ ಹಿಂದೆ ದಣಿವರಿಯದೆ ದುಡಿದಿದ್ದಾರೆ. ಈ ಅವಧಿಯಲ್ಲಿ ಕಲಾವಿದರ ಅತಿಥಿ ಗೃಹದ ವಿಸ್ತರಣೆ ಹಾಗೂ ಪ್ರಸಾಧನ ಕೊಠಡಿಗಳ ನಿರ್ಮಾಣ ಕಾರ್ಯ ನಡೆದಿದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳ ಅನುದಾನ ಕರ್ನಾಟಕ ಸರ್ಕಾರದಿಂದ ಹರಿದು ಬಂದಿದೆ. ಆದರೆ ಅದು ಸೂಕ್ತ ಸಮಯದಲ್ಲಿ ಬರುವಂತೆ ನೋಡಿಕೊಂಡಿದ್ದು ನಾಗರಾಜ್ ಅವರು ಕಾರ್ಯಕ್ಷಮತೆ.

ಕಳೆದ ಬಾರಿ ದೆಹಲಿಯಲ್ಲಿ ನಡೆದ 'ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಉತ್ಸವ' ನಿಜ ಅರ್ಥದಲ್ಲಿ ರಾಷ್ಟ್ರಮಟ್ಟದ ಸಮಾವೇಶ ಆಗಿತ್ತು. ನಾಡು-ಹೊರನಾಡಿನಿಂದ ಕಲಾವಿದರೂ ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ ಆ ಕಾರ್ಯಕ್ರಮದ ಸಂಚಾಲಕರಾಗಿ ನಾಗಾರಾಜ್ ಯಶಸ್ವಿಯಾಗಿ ನಡೆಸಿದ್ದಾರೆ. ಇದು ಅವರ ಸಂಘಟನಾ ಕೌಶಲಕ್ಕೆ ಹಿಡಿದ ಕನ್ನಡಿ.

ಹಿಡಿದ ಕೆಲಸವನ್ನು ಬೆನ್ನು ಹಿಡಿದು ಸಾಧಿಸುವ ಛಾತಿ ನಾಗರಾಜ್ ಅವರಿಗಿದೆ. ಬೆಂಗಳೂರು



ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡ ಅವರ ಹೆಸರು ಇಡುವ ಹಿನ್ನೆಲೆಯಲ್ಲಿ ನಾಗರಾಜ್ ಮಹತ್ವದ ಪಾತ್ರವಹಿಸಿದ್ದಾರೆ. ಇದಕ್ಕಾಗಿ ಅವರು ಮಾಜಿ ಪ್ರಧಾನಿ ಶ್ರೀ ದೇವೇಗೌಡ ಸಮ್ಮುಖದಲ್ಲಿ ಹಿಂದಿನ ಕೇಂದ್ರ ವಿಮಾನಯಾನ ಸಚಿವ ಅಜಿತ್ ಸಿಂಗ್ ಅವರಿಂದಲೇ ಸಂಮಾನ ಸ್ವೀಕರಿಸಿದ್ದಾರೆ.

ನಾಗರಾಜ್ ರಾಜಕೀಯ ಹಿನ್ನಲೆಯ ಕುಟುಂಬದಿಂದ ಬಂದಿದ್ದಾರೆ. ವೈಯಕ್ತಿಕವಾಗಿ ನನಗೆ ಅವರೊಂದಿಗೆ ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿಯಾಗಿ ಕಳೆದ ಅವಧಿ ಸ್ಮರಣೀಯ. ಕನ್ನಡಿಗರಿಗಾಗಿ ಕನ್ನಡಿಗರಿಂದಲೇ ನಿರ್ಮಿಸಲ್ಪಟ್ಟ ಸಂಘ ಎಂಬುದು ಸರಕಾರಿ ಕಛೇರಿಯಲ್ಲ. ಇಲ್ಲಿ ಒಂದು ಬಗೆಯ ಮಾನವೀಯ ಕಳಕಳಿಯೂ ಇರಬೇಕು ಎಂದು ನಾವಿಬ್ಬರೂ ಅರಿತಿದ್ದೆವು. ಇದರಿಂದ ಅಂದಿನ ಕಾರ್ಯಕ್ರಮಗಳು ಸಾಂಗವಾಗಿ ಮತ್ತು ಅರ್ಥಪೂರ್ಣವಾಗಿ ನಡೆದಿದೆ ಎಂದು ನಾಗರಾಜ್ ನೆನೆಯುತ್ತಾರೆ.

ನಾಗರಾಜ್ ಅವರಿಗೆ ಕಲಾಭಿರುಚಿಯಿದೆ. ಅವರ ಪತ್ನಿ ಶ್ರೀಮತಿ ಶೋಭಾನಾಗರಾಜ್ ಅತ್ಯುತ್ತಮ ನೃತ್ಯ ಕಲಾವಿದೆ. ಈ ಬಗೆಯ ವಾತಾವರಣ ಮತ್ತು ಪ್ರೋತ್ಸಾಹದಿಂದ ಮಗಳು ಅನನ್ಯ ಭರವಸೆಯ ಭರತನಾಟ್ಯ ಕಲಾವಿದೆಯಾಗಿ ಮೂಡಿ ಬಂದಿದ್ದಾಳೆ. ಈಗಾಗಲೇ ಅನನ್ಯ ಪ್ರಮುಖ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನ ನೀಡಿ ಮೆಚ್ಚುಗೆ ಪಡೆದಿದ್ದಾಳೆ.

ಕನ್ನಡ ಸೇವೆಗಾಗಿ ನಾಗರಾಜ್ ಅವರು ಹಿಂದೆಯೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಂದ ಸನ್ಮಾನ ಸ್ವೀಕರಿಸಿದ್ದಾರೆ. ಮುಂದಿನ ದಿನಗಳಲ್ಲಿ ರಾಜಕೀಯ ರಂಗ ಪ್ರವೇಶಕ್ಕೆ ಅಣಿಯಾಗಿರುವ ಗೆಳೆಯ ನಾಗರಾಜ್ ಭವಿಷ್ಯ ಉಜ್ವಲವಾಗಿರಲಿ. ಏಕೆಂದರೆ ಸಂಸ್ಕೃತಿ ಮತ್ತು ಕಲೆಯ ಬಗೆಗೆ ಪ್ರೀತಿ ಇರುವ ರಾಜಕಾರಣಿಗಳಿಂದ ಮಾತ್ರ ನಮ್ಮ ನಾಡು ಬೆಳಗಬಲ್ಲದು, ಎಂದು ನಾನು ಬಲವಾಗಿ ನಂಬಿದ್ದೇನೆ. ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪುರಸ್ಕೃತ ಸಿ.ಎಂ. ನಾಗರಾಜ್ ಅವರಿಗೆ ಹೃದಯ ತುಂಬಿದ ಅಭಿನಂದನೆಗಳು. ಅ

***ಡಾ. ವೈ. ಅವನೀಂದ್ರನಾಥ್ ರಾವ್***



# ಸಂಘದಲ್ಲಿ ಇಬ್ಬರು ಮಹಾಕವಿಗಳ ಹಾಡು-ಜೀವನವನ್ನು ಆಧರಿಸಿದ ಎರಡು ನಾಟಕಗಳು

ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಏಪ್ರಿಲ್ 2 ಮತ್ತು 3ರಂದು ಕರ್ನಾಟಕದ ಇಬ್ಬರು ಮಹಾಕವಿಗಳ ಹಾಡು–ಜೀವನವನ್ನು ಆಧರಿಸಿದ ಎರಡು ಅದ್ಭುತ ನಾಟಕಗಳು ಅತ್ಯಂತ ಅರ್ಥಪೂರ್ಣವಾಗಿ ಪ್ರದರ್ಶಿಸಲ್ಪಟ್ಟವು. ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ಡಾ. ದ.ರಾ. ಬೇಂದ್ರೆಯವರ ಬರಹ ಬಾಳನ್ನು ಆಧರಿಸಿದ 'ಗಂಗಾವತರಣ' ಮತ್ತು ಪ್ರೇಮಕವಿ ಎಂದೇ ಮನೆಮಾತಾಗಿರುವ ಮೈಸೂರು ಕೆ.ಎಸ್. ನರಸಿಂಹಸ್ವಾಮಿಯವರ ಬದುಕು–ಕವಿತೆಗಳನ್ನು ಆಧರಿಸಿದ 'ಮೈಸೂರು ಮಲ್ಲಿಗೆ'. ಕರ್ನಾಟಕದಿಂದ ಹಿಂದೆಯೂ ಹಲವಾರು ಸುಪ್ರಸಿದ್ಧ ನಾಟಕ ತಂಡಗಳು ಬಂದು ಅತ್ಯುತ್ತಮವಾದ ನಾಟಕಗಳನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿ ಶಹಬ್ಬಾಸ್ ಎನ್ನಿಸಿಕೊಂಡು ಹೋಗಿವೆ. ಆದರೆ ಈ ಎರಡು ನಾಟಕಗಳು ಅವುಗಳ ವಸ್ತುವಿನ್ಯಾನ, ರಂಗತಂತ್ರ, ಬೆಳಕು, ಸಂಗೀತ, ನಟನೆ, ನಿರ್ದೇಶನ, ವೇಷಭೂಷಣ ಹೀಗೆ ಪ್ರತಿಯೊಂದೂ ಅಂಶಗಳಲ್ಲೂ ಪರಿಪೂರ್ಣತೆಯನ್ನು ಮತ್ತು ಅತ್ಯಂತ ಎತ್ತರದ ತುಂಬಾ ಗಾಂಭೀರ್ಯದ ಮಟ್ಟವನ್ನು ಪ್ರದರ್ಶಿಸಿ ನೆರೆದಿದ್ದ ಸಭಿಕರನ್ನು ಮಂತ್ರಮುಗ್ಧಗೊಳಿಸಿದವು. ಶ್ರೀ ರಾಜೇಂದ್ರ ಕಾರಂತರ ನಿರ್ದೇಶನ, ವಿನ್ಯಾಸ ಮತ್ತು ನಟನೆ ಅದ್ಭುತವಾಗಿತ್ತು. ಹಿನ್ನೆಲೆ ಸಂಗೀತದ ಇಂಪು ಸಭಾಂಗಣದ ತುಂಬೆಲ್ಲಾ ಪಸರಿಸಿತ್ತು. ಡಾ. ಸೀತಾಕೋಟೆ, ಶ್ರೀಮತಿ ಸುಪ್ರಿಯ ಶೆಟ್ಟಿ, ಶ್ರೀ ಸುನಿಲ್‌ಕುಮಾರ್, ಶ್ರೀ ರಾಕೇಶ್ ಕುಮಾರ್, ಇವರುಗಳ ಅಮೋಘ ನಟನಾಶಕ್ತಿ, ವೇಷ–ಭೂಷಣದಲ್ಲಿ ಶ್ರೀ ವಿಜಯಾಕುಮಾರ್ ಬೆಣಚರವರ ಕೈಚಳಕ, ಬೆಳಕಿನ ಕೆ.ಎಸ್.ಆರ್.ಟಿ.ಸಿ. ಶ್ರೀ ನಾಗರಾಜ ಮತ್ತು ಶ್ರೀ ಎಂ.ಜಿ. ನವೀನ್ ಅವರ ಚಾತುರ್ಯ, ನೃತ್ಯಗಳಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಕಲಾವಿದರ ನಟನೆ ಸಭಾಂಗಣದಲ್ಲಿ ಕೂತು ನೋಡುವ ಪ್ರೇಕ್ಷಕನಿಗೆ ಯಾವುದೋ ಟಿ.ವಿ. ಧಾರವಾಹಿಯನ್ನೋ, ಸಿನಿಮಾವನ್ನೋ ಪರದೆಯ ಮೇಲೆ ನೋಡುತ್ತಿದ್ದಂತೆ ಭಾಸವಾಗುತ್ತಿತ್ತು. ಕಿರುತೆರೆ ಮತ್ತು ಸಿನಿಮಾ ನಟ ನಟಿಯರಿಂದ ಕೂಡಿದ ಈ ತಂಡ ತಮ್ಮ ಶುದ್ಧ ಹಾಗೂ ಸ್ಪಷ್ಟವಾದ ಕನ್ನಡ ಉಚ್ಚಾರಣೆ, ಸಂಭಾಷಣೆ, ಅಮೋಘ ನಟನಾ ಸಾಮರ್ಥ್ಯ, ಸುಶ್ರಾವ್ಯ ಸಂಗೀತ ಹಾಗೂ ಕಣ್ಣಿಗೆ ಖುಷಿ ಕೊಡುವ ನೃತ್ಯಗಳ ಮೂಲಕ ನೆರೆದ ಸಭಿಕರನ್ನು ಮಂತ್ರಮುಗ್ಧರನ್ನಾಗಿ ಮಾಡಿದರು. ಶ್ರೀ ರಾಜೇಂದ್ರ ಕಾರಂತರು ಸ್ವತಃ ರಚಿಸಿ ನಿರ್ದೇಶಿಸಿ, ವಿನ್ಯಾಸಗೊಳಿಸಿರುವ ನಾಟಕದಲ್ಲಿ ಬಳಸಿದ ಭಾಷೆ–ಸಂಭಾಷಣೆ ಅತ್ಯಂತ ಸುಂದರ ಹಾಗೂ ಸರಳವಾಗಿತ್ತು. ಡಾ. ದ.ರಾ. ಬೇಂದ್ರೆ ಹಾಗೂ ಶ್ರೀ ಕೆ.ಎಸ್. ನರಸಿಂಹಸ್ವಾಮಿಯವರ ಬರಹ–ಕವಿತೆಗಳನ್ನು ಆಯ್ದು ಈ ಮಹಾನ್‌ಚೇತನಗಳ ನಿಜ ಬದುಕಿನ ಕೆಲವು ಸೂಕ್ಷ್ಮ ಘಟನೆಗಳೊಡನೆ ಹೆಣೆದು ಅತ್ಯಂತ ಅರ್ಥಗರ್ಭಿತವಾಗಿ ಜನ ಸಾಮಾನ್ಯರ





ಮನಮುಟ್ಟುವಂತೆ ಪ್ರದರ್ಶಿಸಿದ್ದೇ ನಾಟಕದ ಈ ಬಾರೀ ಯಶಸ್ಸಿಗೆ ಕಾರಣವಾಗಿತ್ತು. ಗಂಗಾವತರಣದ ಬೇಂದ್ರೆ, ಬೇಂದ್ರೆಯವರ ಆತ್ಮ (ಪ್ರತಿರೂಪ) ಕವಿಯ ಮಡದಿ, ಮಕ್ಕಳು, ಸ್ನೇಹಿತರು, ಪತ್ರಕರ್ತರು, ಸಮಾಜ ಹೀಗೆ ನಾನಾ ಮುಖಗಳನ್ನು ವರಕವಿಯ ಸುಪ್ರಸಿದ್ಧ ಕವಿತೆಗಳೊಡನೆ ಪೋಣಿಸಿ ಸಮಾಜಕ್ಕೆ ಅಗತ್ಯವಾದ ಸಂದೇಶಗಳನ್ನು ಅತ್ಯಂತ ಸೂಕ್ಷ್ಮ ಹಾಗೂ ಮಾರ್ಮಿಕವಾಗಿ ಮುಟ್ಟಿಸುವಲ್ಲಿ ಈ ನಾಟಕ ಸಂಪೂರ್ಣ ಯಶಸ್ಸು ಪಡೆಯಿತು. 'ಒಳ್ಳೇತನ, ಬಿಪಿ–ಶುಗರ್ ಕಾಯಿಲೆಗಿಂತ ಕೆಟ್ಟದ್ದು'. 'ಒಳ್ಳೆತನಕ್ಕೆ ಬಲಿಯಾದವನಿಗೆ ಬದುಕುವುದು ಕಷ್ಟ'. 'ನೋವಿಲ್ಲದೆ ಕಾವ್ಯ ಹುಟ್ಟದು'. 'ಕಾವ್ಯ ಮಾರಾಟದ ವಸ್ತು ಅಲ್ಲ'. ಹೀಗೆ ಹಲವಾರು ತಾತ್ವಿಕ ಮಾತುಗಳನ್ನು ಸಾಂದರ್ಭಿಕವಾಗಿ ನಿರ್ದೇಶಕರು. ವಿಭಿನ್ನ ಪಾತ್ರಗಳ ಮೂಲಕ ಪ್ರೇಕ್ಷಕರಿಗೆ ಮುಟ್ಟಿಸುತ್ತಾರೆ.

ಮೈಸೂರು ಮಲ್ಲಿಗೆಯ ಪ್ರೇಮ, ಪ್ರೀತಿ, ಮದುವೆ–ಗಂಡ–ಹೆಂಡತಿ, ಆಫೀಸು–ಮನೆ, ಮಗ–ಸೊಸೆ,

## ಅನಿಸಿಕೆ

ದೆಹಲಿ ಕರ್ನಾಟಕ ಸಂಘದ ರಂಗಮಂಚದಲ್ಲಿ ಏಪ್ರಿಲ್ 2 ಮತ್ತು 3ರಂದು ಸಂಜೆ ಅತ್ಯದ್ಭುತವಾಗಿ ಪ್ರದರ್ಶನಗೊಂಡ ಎರಡು ನೃತ್ಯ ನಾಟಕಗಳು –'ಗಂಗಾವತರಣ' ಮತ್ತು 'ಮೈಸೂರು ಮಲ್ಲಿಗೆ' ಕ್ರಮವಾಗಿ ದ.ರಾ. ಬೇಂದ್ರೆ ಮತ್ತು ಕೆ.ಎಸ್. ನರಸಿಂಹಸ್ವಾಮಿಯವರ ಬದುಕನ್ನು ಪ್ರತಿಬಿಂಬಿಸುವಂತಿದ್ದು ಎಲ್ಲರ ಮನಸೂರೆಗೊಂಡವು! ನೋಡಿ ಅನುಭವಿಸಿದ ನಾನೂ ಧನ್ಯಳು.

ವಿಜಯ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಡಿ.ಎನ್. ವೆಂಕಟರಾವ್ ಅವರ ನಾಟಕ ಮಾಡಿಸುವ ನಿಷ್ಠೆಯ ಸಾಹಸ ಅತ್ಯಂತ ಶ್ಲಾಘನೀಯ. ಅವರ ದಕ್ಷತೆಯ ದೀಕ್ಷೆಗೆ ತಲೆಬಾಗುವೆ.

ಅಂತೆಯೇ ರಾಜೇಂದ್ರ ಕಾರಂತರ 'ಬೇಂದ್ರೆಯವರ ಆತ್ಮ ಮತ್ತು ಕೆ.ಎಸ್. ನರಸಿಂಹಸ್ವಾಮಿಯವರ 'ಬಳೆಗಾರ ಚೆನ್ನಿಗ' ಎರಡು ಪಾತ್ರಗಳೂ ಜೀವನ ನೈಜತೆಯನ್ನು, ಅದರ ಸೊಬಗನ್ನು "ಸಂಭವಾಮಿ ಯುಗೇ ಯುಗೇ" ಎನ್ನುವ ದೈವವಾಣಿಯಂತೆ ದಿ. ಬಿ.ವಿ. ಕಾರಂತರ ನಾಟಕದ ನಿರ್ದೇಶನದ ಶೈಲಿಯನ್ನು ಮರುಕಳಿಸುವಂತೆ ಮಾಡಿದ್ದು ರೋಮಾಂಚನಕರವಾಗಿತ್ತು!

'ಬಡತನ ಒಂದು ಕಡೆ, ಬ್ರಹ್ಮೇತಿ ಕಾಟ ಒಂದು ಕಡೆ' ಎಂಬ ಗಾದೆ ಮಾತಿನಂತೆ ಆ ಸ್ಥಿತಿಯನ್ನು ಸಕಾರಾತ್ಮಕ ದೃಷ್ಟಿಯಿಂದ ಹಿರಿಯ ಕವಿಗಳು ತಮ್ಮ ಕಾವ್ಯಲೋಕದಲ್ಲಿ ಸುಂದರ ಸಾಲುಗಳಿಂದ ಕವಿತೆಯ ಮೂಲಕ ಅರಿವು ಮೂಡಿಸಿದ್ದಾರೆ. ಸಾಮಾನ್ಯ ಜನಗಳು ಯೋಚಿಸಲೂ ಸಾಧ್ಯವಿಲ್ಲದ ದೃಷ್ಟಿಯಲ್ಲಿ ಅವರು ತಮ್ಮ ಜೀವನ ನಡೆಸಿ ಎಲ್ಲೆಡೆಯೂ ಎಲ್ಲರ ಮನವನ್ನು ಮುಟ್ಟಿದರು.

ನಾನು 15ವರುಷದವಳಾಗಿದ್ದಾಗ ತುಮಕೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್‌ನಲ್ಲಿದ್ದಾಗ ಒಂದು ಬಾರಿ ಬೇಂದ್ರೆಯವರನ್ನು ಕರೆಸಿ ಒಕ್ಕಲಿಗರ ಹಾಸ್ಟೆಲ್‌ನಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ನಾವೆಲ್ಲಾ ವಿದ್ಯಾರ್ಥಿಗಳು ಜಮಖಾನದ ಮೇಲೆ ಕುಳಿತಿದ್ದೆವು. ದ.ರಾ. ಬೇಂದ್ರೆಯವರು ಅನೇಕ ಕವಿತೆಗಳನ್ನು ಹಾಡಿದರು. ನಾನು ಆಗ ಎದ್ದುಹೋಗಿ ಅವರ ಬಳಿನಿಂತೆ. ಅವರು ಏನೇ ಹುಡುಗಿ– ಏನು ಬೇಕು ಎಂದರು. ನಾನು ಇನ್ನೊಂದು ಬಾರಿ 'ಉದಿತ ದಿನ' ಮತ್ತು 'ಘುನ್ ಘುನ್ ಎಂದು ದುಂಬಿ ಹಾಡಿತು" ಪುನಃ ಕೇಳಬೇಕೆಂದೆ. ಅವರು ತಮ್ಮ ಸಹಜ ಶೈಲಿಯ ನಗುಮುಖದೊಂದಿಗೆ ನನ್ನ ತಲೆ ಮೇಲೆ ಕೈ ಇಟ್ಟು ಹಾಡಿದರು! ಇದು ನನ್ನ ಅತ್ಯಂತ 'ಮಹತ್ವದ ದಿನ'! ನನ್ನ ಸೌಭಾಗ್ಯ. ನಾವಿಂದು ಈ ಸುಂದರ ಭೂಮಿಯಲ್ಲಿ ಹುಟ್ಟಿದ್ದೇವೆ. ಜೀವನ ನಾಟಕದಲ್ಲಿ ಅರ್ಥೈಸಿಕೊಳ್ಳುವ ಅನೇಕ ಅನುಭವಗಳಾಗುತ್ತವೆ. ಸದಾ ಕಾಲವೂ ಸಕಾರಾತ್ಮಕವಾಗಿ ಬಾಳನ್ನು ರಚಿಸಿಕೊಂಡರೆ ಅನೇಕ ಸಮಸ್ಯೆಗಳನ್ನು ಎದುರಿಸಬಹುದು. ಅ

***ಡಾ. ಅಹಲ್ಯಾಚಿಂತಾಮಣಿ***

ಆಳಿಯ–ಮಗಳು ಹೀಗೆ ಇಡೀ ಸಂಸಾರದ ವಿಸ್ತಾರ ಹಾಗೂ ವಿವರವಾದ ಸುಂದರ ಸರಳ ಸತ್ಯದ ಪ್ರದರ್ಶನದ ಜೊತೆಗೆ ಕವಿ ತನ್ನ ಜೀವನದಲ್ಲಿ ಬದುಕಲು ಪಡುವ ಪಾಡನ್ನು ತನ್ನ ಸ್ವಾಭಿಮಾನಕ್ಕಾಗಿ ಮಗನ ಹಂಗಿಗೆ ಬೀಳದೆ, ಹೆಂಡತಿಯ ಅನಾರೋಗ್ಯವನ್ನು ತಾಳಲಾರದೆ ತನ್ನ ಕೃತಿಗಳನ್ನೇ ವ್ಯಾಪಾರ ಮಾಡುವ ಮೂಲಕ ತೋರಿಸಿದರೆ, ಚಂದ್ರ, ನಕ್ಷತ್ರ, ಬೆಳದಿಂಗಳು, ಮೈಸೂರು ಮಲ್ಲಿಗೆ, ಕಲ್ಪವೃಕ್ಷ, ನೆಲ–ನದಿ–ಮಾವನಮನೆ–ತವರುಮನೆ ಹೀಗೆ ಪ್ರಕೃತಿ ಮತ್ತು ಜೀವನದ ಅನ್ಯೋನ್ಯ ಸಂಬಂಧಗಳನ್ನು ಅತೀ ಸೂಕ್ಷ್ಮ ದೃಷ್ಟಿಕೋನದಿಂದ ನೋಡುವಂತೆ ಪ್ರೇಕ್ಷಕರನ್ನು ಅಣಿವು ಮಾಡುತ್ತದೆ. ನಾಟಕದ ವಸ್ತು, ಸಂಗೀತ ಮತ್ತು ಪ್ರದರ್ಶನ.





ಎರಡೂ ನಾಟಕಗಳಲ್ಲಿ ಪ್ರೇಕ್ಷಕನಿಗೆ ತನಗೆ ತಿಳಿಯುವಂತೆ ಕಣ್ಣೀರು ಬರುವುದು, ಕನ್ನಡ ಭಾಷೆ, ನೆಲ, ಜಲದ ನುಡಿಯಿಂದಾಗಿ ಎಲ್ಲ ಸಂವೇದನಾಶೀಲ ಕವಿಗಳ, ಬುದ್ಧಿಜೀವಿಗಳ ಬಗ್ಗೆ ಗೌರವ ಮೂಡುವುದು. ಹೀಗೆ ನಾಟಕಗಳು ಕನ್ನಡ ಭಾಷೆ, ಕನ್ನಡ ಬರಹಗಾರರು, ಕವಿ, ಸಾಹಿತಿಗಳಿಗೆ ಹಾಗೂ ಕರ್ನಾಟಕ ನಾಡು–ನುಡಿ ಜನರೆಲ್ಲರ ಮೇಲೆ ಒಂದು ವಿಶೇಷ ಆಸಕ್ತಿ ಗೌರವ ಮೂಡಿಸುತ್ತವೆ.

ಇಂತಹ ಅದ್ಭುತವಾದ ನಾಟಕಗಳನ್ನು ಸೃಷ್ಟಿ ಮಾಡಿಸಲು ಈ ತಂಡದ ಹಿಂದೆ ಎಲೆ ಮರೆಯ ಕಾಯಿಯಂತೆ ತನ್ನ ಸಂಪೂರ್ಣ ತನು, ಮನ, ಧನವನ್ನು ಧಾರೆ ಎರೆದು ದುಡಿಯುತ್ತಿರುವವರು ಪ್ರೊ. ಡಿ.ಎನ್. ವೆಂಕಟರಾವ್, ನಿವೃತ್ತ ಪ್ರಾಂಶುಪಾಲರು ವಿಜಯ ಕಾಲೇಜು, ಬೆಂಗಳೂರು, ಇವರ ಕೊಡುಗೆಯನ್ನು ಎಷ್ಟು ಪ್ರಶಂಶಿಸಿದರೂ ಸಾಲದು. ಯಾವುದೋ ಒಂದು ಸರ್ಕಾರ ಅಥವಾ ಅಕಾಡೆಮಿ ಮಾಡಬೇಕಾದ ಕೆಲಸವನ್ನು ಓರ್ವ ವ್ಯಕ್ತಿ ತನ್ನ ಸ್ವಂತ ಅಭಿರುಚಿ, ಆಸಕ್ತಿ ಹಾಗೂ ಕನ್ನಡದ ಮೇಲಿನ ಅಪಾರ ಪ್ರೀತಿಯಿಂದಾಗಿ ಮಾಡಿಕೊಂಡು ಬರುತ್ತಿದ್ದಾರೆ ಎಂಬುದು ಎಂತಹ ಆಶ್ಚರ್ಯದ ಮಾತು.

ಇಂತಹ ಅತ್ಯುತ್ತಮ ನಾಟಕಗಳನ್ನು ಬಹಳ ಮುತುವರ್ಜಿಯಿಂದ ಸಿದ್ದಪಡಿಸಿಕೊಂಡು 45–50 ಮಂದಿ ಯುವ ನಟ ನಟಿಯರನ್ನು ಒಗ್ಗೂಡಿಸಿ ಕರ್ನಾಟಕದಿಂದ ದೂರದ ದೆಹಲಿಗೆ ಬಂದು ಅತ್ಯಂತ ಶ್ರದ್ಧೆ–ಭಕ್ತಿಯಿಂದ ನಾಟಕ ಪ್ರದರ್ಶನ ನೀಡಿ ದೆಹಲಿಯ ಕನ್ನಡಿಗರಲ್ಲಿ ಮತ್ತೊಮ್ಮೆ ಕನ್ನಡ ಅಭಿಮಾನವನ್ನು ಬಡಿದೆಬ್ಬಿಸಿದ ಈ ತಂಡದ ಶ್ರಮ ಶ್ಲಾಘನೀಯ. ಜನಸಾಮಾನ್ಯರು ಅಷ್ಟೊಂದು ಸುಲಭವಾಗಿ ಅರ್ಥಮಾಡಿಕೊಳ್ಳಲಾಗದ ಕನಸುಗಾರ–ಜಾದುಗಾರನೆಂದೇ ಹೆಸರಾಗಿದ್ದ ವರಕವಿ ಡಾ. ದ.ರಾ. ಬೇಂದ್ರೆ ಹಾಗೂ ಜನಪ್ರಿಯ ಧ್ವನಿಸುರಳಿಗಳ ಮೂಲಕ ಮನೆಮಾತಾಗಿರುವ ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿಯವರಂತವರ ಅತ್ಯಂತ ಅರ್ಥಪೂರ್ಣವಾದ ಸಾಮಾನ್ಯ–ಜೀವನವನ್ನು ಪರಿಚಯಿಸಿದ ಈ ನಾಟಕಗಳು ದೆಹಲಿ ಕನ್ನಡಿಗರ ಮನಃಪಟಲದಲ್ಲಿ ಸದಾ ಹಸಿರಾಗಿಯೇ ಉಳಿಯುತ್ತೇವೆ ಎಂಬುದರಲ್ಲಿ ಯಾವ ಸಂಶಯವಿಲ್ಲ. ಅ

*ಸಖಾರಾಮ ಉಪ್ಪೂರು*



**ಪ್ರೊ. ಡಿ.ಎನ್. ವೆಂಕಟರಾವ್** : ಬೆಂಗಳೂರಿನ ಜಯನಗರದಲ್ಲಿರುವ ಪ್ರತಿಷ್ಠಿತ ವಿಜಯ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಗಣಿತವೆಂದರೆ ಕಬ್ಬಿಣದ ಕಡಲೆ ಎಂಬಂತೆ ಹೆದರುವ ವಿದ್ಯಾರ್ಥಿಗಳಲ್ಲೂ ಗಣಿತವನ್ನು ಸುಲಭ ಗ್ರಾಹ್ಯವಾಗುವಂತೆ ಬೋಧಿಸಬಲ್ಲ ಅದ್ಭುತ ಟೀಚರ್... ಶಿಸ್ತು, ಸಮಯಪಾಲನೆ, ಕರ್ತವ್ಯ ಶಿಷ್ಠೆಗೆ ಇನ್ನೊಂದು ಹೆಸರಾಗಿರುವ ವೆಂಕಟರಾಯರ ಕನ್ನಡಪ್ರೀತಿ ಅಸಾಧಾರಣ!

ಪ್ರತಿವರ್ಷ ಕಾಲೇಜಿನ ಆವರಣದಲ್ಲಿ ಕನ್ನಡದ ಕವಿ ಅಥವ ಸಾಹಿತಿ ಯಾರಾದರೂ ಒಬ್ಬರನ್ನು ಕುರಿತಂತೆ ವಿಚಾರ ಸಂಕಿರಣವನ್ನು ಏರ್ಪಡಿಸುತ್ತ, ಗೋಷ್ಠಿಗಳನ್ನು ನಡೆಸಿ, ಪ್ರಕಟಿಸುತ್ತ ಸಾಹಿತ್ಯ ಸಂತರ್ಪಣೆಯನ್ನು ನಡೆಸುತ್ತಾ ಬಂದಿರುತ್ತಾರೆ. ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವ ಶ್ರೀಯುತರ ನಾಟಕಾಸಕ್ತಿಯ ಫಲವೇ 'ರಂಗ ಸೌರಭ' ...ಕಾಲೇಜಿನಲ್ಲಿ ರಂಗ ತರಬೇತಿ ಶಿಬಿರ ಏರ್ಪಡಿಸುತ್ತ, ನುರಿತ ನಿರ್ದೇಶಕರುಗಳನ್ನು ಆಹ್ವಾನಿಸುತ್ತ, ವಿದ್ಯಾರ್ಥಿಗಳಲ್ಲಿ ಅಭಿರುಚಿ, ಆಸಕಿ ಹಾಗೂ ಜೀವನೋತ್ಸವ ತುಂಬುವಲ್ಲಿ ಶ್ರೀಯುತರ ಕೊಡುಗೆ ಅಪಾರ. 16ವರ್ಷ... ಸುಮಾರು 15ಕ್ಕೂ ಹೆಚ್ಚು ನಾಟಕ... ನೂರಕ್ಕೂ ಹೆಚ್ಚಿನ ಪ್ರಶಸ್ತಿಗಳನ್ನು ಪಡೆದಿರುವ ಹಾಗೂ 150ಕ್ಕೂ ಹೆಚ್ಚು ಪ್ರದರ್ಶನಗಳ ರೂವಾರಿ ವೆಂಕಟರಾಯರು... ಬೇಂದ್ರೆ ಸಾಹಿತ್ಯದ ಆಪ್ತ ಅಭಿಮಾನಿ ಆಗಿದ್ದುದರ ಫಲಶ್ರುತಿ ಗಂಗಾವತರಣ'.

**ರಾಜೇಂದ್ರ ಕಾರಂತ–ನಿರ್ದೇಶಕರು** : ಕನ್ನಡದ ಶ್ರೇಷ್ಠ ನಾಟಕಕಾರರಲ್ಲಿ ರಾಜೇಂದ್ರ ಕಾರಂತರು ಪ್ರಮುಖರು. ಇವರು 42 ನಾಟಕಗಳನ್ನು ರಚಿಸಿದ್ದಾರೆ. ಕಾರ್ಪೋರೇಷನ್ ಬ್ಯಾಂಕ್‌ನ ಉದ್ಯೋಗಿಯಾದ ಇವರು ಉತ್ತಮ ಕ್ರಿಕೆಟಿಗರೂ ಹೌದು. ಹಲವಾರು ಚಲನಚಿತ್ರಗಳಿಗೆ ಸಂಭಾಷಣೆ ರಚಿಸಿದ್ದಾರೆ ಅವುಗಳಲ್ಲಿ 'ರಾಮ ಶಾಮ ಭಾಮ' ಮತ್ತು 'ಆ್ಯಕ್ಸಿಡೆಂಟ್' ಪ್ರಮುಖವಾದುದು. ಉತ್ತಮ ನಟರೂ ಆಗಿರುವ ಇವರು ರಂಗಭೂಮಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ 'ಅಕ್ಕ' ಧಾರವಾಹಿಯ ಮೂಲಕ ಕಿರುತೆರೆಯಲ್ಲಿ ನಿರತರಾಗಿರುವ ಇವರಿಗೆ ಕಲರ್ಸ್ ಕನ್ನಡದ ಅತ್ಯುತ್ತಮ ವಿಲನ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅ



# ಅಪರೂಪದ ಎರಡು ನಾಟಕಗಳು

ನನ್ನ ಜೀವನದಲ್ಲಿ ನಾನು ನೋಡಿದ ಅತ್ಯಂತ ಉತ್ತಮವಾದ ನಾಟಕಗಳು 'ಗಂಗಾವತಾರಣ' ಮತ್ತು 'ಮೈಸೂರು ಮಲ್ಲಿಗೆ'. ರಾಜೇಂದ್ರ ಕಾರಂತರು ಈ ಎರಡು ನಾಟಕಗಳಲ್ಲಿ ಜೀವಿಸಿದ್ದಾರೆ. ನಮ್ಮ ಕನ್ನಡ ಭಾಷೆಯ ಬಂಗಾರದಂತಹ ನುಡಿಗಳನ್ನು ಕೇಳಿ ಅದರ ಕಸ್ತೂರಿ ಸುವಾಸನೆಯನ್ನು ಸವಿಯಬೇಕಾದರೆ ಈ ತರಹ ನಾಟಕಗಳಿಗಿಂತ ಮತ್ತೊಂದು ವಿಧಾನ ಇಲ್ಲ. ಇತ್ತೀಚೆಗೆ ಬುದ್ಧಿಜೀವಿಗಳನ್ನು ಅತ್ಯಂತ ಹೀನಾಯವಾಗಿ ಮಾತಾನಾಡಿದ್ದನ್ನು ನಾವು ಮಾಧ್ಯಮಗಳಲ್ಲಿ ಕಾಣಬಹುದು. ಆದರೆ ಆ ಬುದ್ಧಿಜೀವಿಗಳು ಬದುಕಿನಲ್ಲಿ ಯಾವ ತರಹ ಜೀವನ ನಡೆಸಿದ್ದಾರೆ ಎಂದು ತಿಳಿದರೆ ಎಂದೆಂದಿಗೂ ನಾವು ಅವರ ಬಗ್ಗೆ ತುಚ್ಛ ಮಾತುಗಳನ್ನು ಆಡಲಾರೆವು. ಅದಕ್ಕೆ ಉದಾಹರಣೆ ವರಕವಿ ದ.ರಾ.ಬೇಂದ್ರೆ ಮತ್ತು ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಇವರು ಜೀವನ ಪರ್ಯಾಂತ ನೋವನ್ನು ಅನುಭವಿಸಿದ ಕವಿಗಳು. ಸುಖ ಎಂಬುದನ್ನು ಕಾಣಲಾಗದವರು. ಅವರ ಜೀವನ ಚರಿತ್ರೆಯ ನಾಟಕಗಳನ್ನು ನೋಡಿದ ನಾನು ನಿಜವಾಗಿಯೂ ಧನ್ಯನು.

ಇಂದು ಗಂಡ–ಹೆಂಡತಿ, ಅಪ್ಪ–ಅಮ್ಮ, ಅಜ್ಜ–ಅಜ್ಜಿ ಇಂಥ ಯಾವ ಸಂಬಂಧಗಳೂ ನಮಗೆ ಆನಂದ ತರುತ್ತಿಲ್ಲ. ನಮ್ಮ ಸಂಸಾರವನ್ನು ಆನಂದ ಸಾಗರ ಮಾಡಿಕೊಳ್ಳುವ ಕೌಶಲ ನಮಗೆ ಗೊತ್ತಿಲ್ಲ. ಆ ಕಲೆಯಲ್ಲಿ ಕೆ.ಎಸ್. ನರಸಿಂಹಸ್ವಾಮಿ ನಿಪುಣರು. ಅದನ್ನು ಇತರರಿಗೆ ಕಲಿಸಲು ಅವರಿಗೆ ಎಲ್ಲಿಲ್ಲದ ಆಸಕ್ತಿ. ಕುಟುಂಬದ ಸಾರ–ಸಾರ್ಥಕತೆಯನ್ನು ಮನದಲ್ಲಿ ಬಿತ್ತಿದ ಕೆಎಸ್‌ನ, ತಮ್ಮ ಪದ್ಯಗಳ ಮೂಲಕ ಇಂದಿಗೂ ನಮ್ಮ ಮಧ್ಯೆ ಜೀವಂತ. ಒಲವಿನ ವಿಸ್ಮಯ, ಬೆರಗು, ನೋವು, ತಳಮಳಗಳು ಅವರ ಪದ್ಯದಲ್ಲಿ ಹರಡಿಕೊಂಡಿವೆ. ಅದರಾಚೆ ಅವರು ಸಾಕಷ್ಟು ಬರೆದರೂ, ಒಲವಿನಷ್ಟು ಓದುಗರನ್ನು ಸೆಳೆದದ್ದು ಇನ್ನೊಂದಿಲ್ಲ. 1942ರಿಂದ ಈವರೆಗೆ 30ಕ್ಕೂ ಹೆಚ್ಚು ಮುದ್ರಣ ಕಂಡಿರುವ 'ಮೈಸೂರು ಮಲ್ಲಿಗೆ' ಅದು ಕೇವಲ ಒಂದು ಪುಸ್ತಕವಲ್ಲ. ಮನೆಯ ಜೀವಂತಿಕೆ ಮತ್ತು ಪ್ರತಿಷ್ಠೆ ಹೆಚ್ಚಿಸುವ ಸಂಜೀವಿನಿ. 'ಮೈಸೂರು ಮಲ್ಲಿಗೆ' ಮಲ್ಲಿಗೆ ಕವಿಯ ಬದುಕು, ಬರಹಗಳಿಗೆ ಕನ್ನಡಿಯಾಗುವ ಈ ನಾಟಕಕ್ಕೆ, 'ಮೈಸೂರು ಮಲ್ಲಿಗೆ' ಪದ್ಯಗಳೇ ಮಣ್ಣು–ನೀರು ಮತ್ತು ಬೆಳಕು. ಪದ್ಯಗಳ ಮೂಲಕ ಕವಿಯನ್ನು ಕಾಣುವ, ಅರ್ಥೈಸಿಕೊಳ್ಳುವ ಈ ವಿನೂತನ ಪ್ರಯತ್ನದಿಂದ ಮಲ್ಲಿಗೆ ಕಂಪು ಇನ್ನಷ್ಟು ಪಸರಿಸಿದೆ.

ಕವಿಯ ಯೌವ್ವನ, ಮಧ್ಯ ವಯಸ್ಸು, ವೃದ್ಧಾಪ್ಯದ ಪಾತ್ರಗಳಿಗೆ ವಿಜಯಸಿಂಹ, ಕಿಟ್ಟಿ ಮತ್ತು ರಾಜಾರಾಂ ಜೀವ ತುಂಬಿದರು. ಕವಿ ಪತ್ನಿಯಾಗಿ ಯೌವ್ವನಾವಸ್ಥೆಯಲ್ಲಿ ವಸಂತಲಕ್ಷ್ಮಿ ಮತ್ತು ಲಕ್ಷ್ಮಿ, ನಂತರದ ದಿನಗಳಲ್ಲಿ ವಿದ್ಯಾ ತಮ್ಮ ಪ್ರಬುದ್ಧ ಅಭಿನಯದಿಂದ ಗಮನಸೆಳೆದರು. ಬೆನ್ನು ಬಾಗಿದ ಬಳೆಗಾರ ಚೆನ್ನಯ್ಯನ ಪಾತ್ರದಲ್ಲಿ ರಾಜೇಂದ್ರ ಕಾರಂತ್ ಅವರದು ಚಪ್ಪಾಳೆಗಿಟ್ಟಿಸುವಂಥ ಅಭಿನಯ. ಶ್ಯಾನುಭೋಗರ ಮಗಳನ್ನು ಮದುವೆಯಾದ ನಂತರದ ಕವಿಯ ಬದುಕು ಹೇಗಿತ್ತು ಎನ್ನುವುದರಿಂದ ಆಕೆಯ ಸಿಟ್ಟು–ಸೆಡವಿನವರೆಗೆ. ಎಲ್ಲದರಲ್ಲೂ ಕವಿಗೆ ಚೆಲುವನ್ನೇ ಕಾಣುವ ಹಂಬಲ. ಅಥವಾ ಅನಿವಾರ್ಯತೆ ಎಂದೂ ಕರೆಯಬಹುದು. ಇದೆಲ್ಲವೂ ನಾಟಕದಲ್ಲಿ ಎಳೆಎಳೆಯಾಗಿ ವ್ಯಕ್ತವಾಗಿದೆ.

ಪ್ರೀತಿಗೊಂದು ವಯಸ್ಸಿದೆಯಾ? ಕೆಎಸ್‌ನ ಅವರಂತೂ ತಮ್ಮ ಕಡೇಕಾಲದ ತನಕ ಪ್ರೇಮ ಕವನಗಳನ್ನೇ ಬರೆದರು. ಒಲವನ್ನು ಸುದೀರ್ಘ ಕಾಲ ಕಾಯ್ದುಕೊಂಡ ಅವರ ತಾಕತ್ತು ದೊಡ್ಡದು. ಅರ್ಥವಾಗದಂತೆ ಬರೆಯುವುದೇ ಶ್ರೇಷ್ಠತೆ ಎಂಬ ನವ್ಯದ ಅಬ್ಬರದ ಮಧ್ಯೆ, ಕೆಎಸ್‌ನ ಭಿನ್ನ. ಅವರು ನವ್ಯ ಬರೆಯಲಿಲ್ಲವೆಂದಲ್ಲ. ಆದರೆ ಪ್ರೇಮಗೀತೆಗಳ ಸುಳಿಯಲ್ಲಿ ಅದು ತೆರೆಮರೆ. 78ನೇ ವಯಸ್ಸಿಗೆ ಇಹಲೋಕ ತ್ಯಜಿಸಿದ ಹಿರಿಯ ಕವಿಯ ಬದುಕು, ಬಡತನ, ಅತೃಪ್ತಿ, ದುಗುಡ, ದುಮ್ಮಾನ, ಸಿಡುಕು, ಅಸಹಾಯಕತೆ, ಹಿರಿಮೆ ಮತ್ತು ಸಾವು ಇವೆಲ್ಲವೂ ನಾಟಕದ ವಸ್ತು. ಬಳೆಗಾರ ಚೆನ್ನಯ್ಯ ಬಾಗಿಲಿಗೆ, ತೌರ ಸುಖದೊಳಗೆನ್ನ, ಸಿರಿಗೆರೆಯ ನೀರಿನಲ್ಲಿ, ರಾಯರು ಬಂದರು, ನಿನ್ನ ಪ್ರೇಮದ ಪರಿಯ ಗೀತೆಗಳು ಸಾಂದರ್ಭಿಕವಾಗಿ ನಾಟಕದಲ್ಲಿ ಬಳಕೆಯಾಗಿವೆ. ಕತೆ ಮತ್ತು ಪದ್ಯಗಳು ಎಲ್ಲಿಯೂ ಬೇರೆಬೇರೆಯಾಗಿ ಕಾಣುವುದಿಲ್ಲ. ಇವೆರಡೂ ದಾರಕ್ಕೆ ಮಲ್ಲಿಗೆ ಮೊಗ್ಗು ಪೋಣಿಸಿದಂತೆ ಅಂದ ಮತ್ತು ಚೆಂದ. ಮೈಸೂರು ಮಲ್ಲಿಗೆ ಎಂದರೆ ಬಳೆಗಾರ ಚೆನ್ನಯ್ಯ ನೆನಪಾಗುತ್ತಾನೆ.

ಫ್ಲ್ಯಾಷ್‌ಬ್ಯಾಕ್‌ನಲ್ಲಿ ಕವಿಯ ಬದುಕು ಅನಾವರಣಗೊಳ್ಳುತ್ತದೆ. ಪ್ರತಿ ದೃಶ್ಯಕ್ಕೂ ಚೆನ್ನಯ್ಯ ಸಾಕ್ಷಿ ಬಿಂದು. ಶಾನುಭೋಗರ ಮಗಳು ಸೀತಮ್ಮಳ (ಕವಿಯ ಪತ್ನಿ) ಮರಿಮಗಳು ಮತ್ತು ಆಕೆಯ ಮೊಮ್ಮಕ್ಕಳನ್ನು ನವಿಲೂರಿನಲ್ಲಿ ಭೇಟಿ ಮಾಡುವ ಚೆನ್ನಯ್ಯ, ಹಳೆಯದನ್ನು ನೆನೆಯುತ್ತಾನೆ. ಆ ದಿನಗಳು ಹೇಗಿದ್ದವು, ಕೆಎಸ್‌ನ ಬದುಕು ಹೇಗಿತ್ತು ಎನ್ನುವುದನ್ನು ಹೇಳುತ್ತಾ ಹೋಗುತಾನೆ.

ಅಂದಿಗೂ ಇಂದಿಗೂ ಇರುವ ಬದಲಾವಣೆ ಕಂಡು ಚೆನ್ನಯ್ಯ ಅಚ್ಚರಿಪಡುತ್ತಾನೆ. 'ಬೀಸೋ ಗಾಳಿ ಬದಲಾಗಿಲ್ಲ. ಹರಿಯೋ ನೀರು ಬದಲಾಗಿಲ್ಲ. ಮಲ್ಲಿಗೆ ಹೂವು ಬದಲಾಗಿಲ್ಲ. ಬೆಳದಿಂಗಳು ಬದಲಾಗಿಲ್ಲ. ಭೂಮಿ ಅಂಗೇ ಇದೆ. ಸೂರ್ಯನೂ ಬದಲಾಗಿಲ್ಲ. ಆದರೆ ಈ ಮನುಷ್ಯ ಮಾತ್ರ ಈ ಪಾಟಿ ಬದಲಾಗಿದ್ದಾನೆ' ಎನ್ನುವ ಅವನ ಮಾತು, ಆಧುನಿಕ ಪ್ರಪಂಚಕ್ಕೆ ಪ್ರಶ್ನೆ. 'ಎಲ್ಲ ಬದಲಾದರೂ ಬದಲಾಗದ್ದು, ಈ ಹಳ್ಳಕೊಳ್ಳದ ರಸ್ತೆಗಳು ಮಾತ್ರ' ಎನ್ನುವ ಮೂಲಕ ಆಡಳಿತ ಯಂತ್ರವನ್ನು ಚುಚ್ಚುತ್ತಾನೆ. ಇಂಥ ಮೊನಚು ಸಂಭಾಷಣೆ ನಾಟಕದುದ್ದಕ್ಕೂ ಬೆರೆತಿದೆ.

ಎರಡು ಪೀಳಿಗೆಯ ಕೊಂಡಿಯಂತೆ ಕಾಣಿಸಿಕೊಳ್ಳುವ ಚೆನ್ನಯ್ಯ ದಾಹವೆಂದಾಗ ಪುಟಾಣಿಗಳು ಪೆಪ್ಸಿ ತಂದು ಕೊಡುತ್ತಾರೆ. 'ನನಗಿದ್ದೆಲ್ಲ ಬೇಡ ನೀರು ಕೊಡಿ. ಇಲ್ಲೆಲ್ಲೋ ಸಿಹಿನೀರು ಬಾವಿ ಇದ್ದಲ್ಲ.. ಎಲ್ಲಿ' ಎಂದು ಚೆನ್ನಯ್ಯ ಹುಡುಕಾಡುತ್ತಾನೆ. 'ಬಾವಿ ನೀರು ಕೆಟ್ಟಿದೆ' ಎನ್ನುವುದನ್ನು ಕೇಳಿ, 'ಇಲ್ಲ ಅದು ಕೆಟ್ಟಿಲ್ಲ... ನೀವು ಕೆಡಿಸಿದ್ದೀರಿ' ಎನ್ನುವ ಮೂಲಕ ಕುಟುಕುತ್ತಾನೆ. ಕವಿಯ ಮದುವೆ, ಆ ಸಂಭ್ರಮದ ಯೌವ್ವನ, ಪ್ರೇಮ ಇದು ಮೊದಲ ಭಾಗದಲ್ಲಿ ಅನಾವರಣಗೊಳ್ಳುತ್ತದೆ.

ಸಾಂಸಾರಿಕ ಬದುಕಿನ ಕಷ್ಟ, ದುಡ್ಡಿನ ಕಷ್ಟ, ಮಗಳ ದುರಂತ, ಗಂಡ–ಹೆಂಡತಿ ಪ್ರತ್ಯೇಕ ಜೀವನ ನಡೆಸುವುದು, ಮಗ ಬಂದು ಕರೆಯುವುದು, ಕವಿ ನಿರಾಕರಣೆ ಇವೆಲ್ಲವೂ ನಾಟಕದ ಎರಡನೇ ಭಾಗದಲ್ಲಿವೆ. ಮಗನ ಮೇಲಿನ ಕೋಪವನ್ನು 'ಯಾತ್ರೆ' ಕವಿತೆ ಮೂಲಕ ಕವಿ ತೀರಿಸಿಕೊಳ್ಳುತ್ತಾರೆ. ಮೊಮ್ಮಗನ ಮೇಲೆ 'ಅತ್ತಿತ್ತ ನೋಡದಿರು, ಅತ್ತು ಹೊರೆಳಾಡದಿರು' ಪದ್ಯವನ್ನು ಬರೆದು, ಅದು ಮುಂದಿನವಾರದ ಸುಧಾದಲ್ಲಿ ಬರುತ್ತೆ. ದಯವಿಟ್ಟು ಓದು ಎಂದು ಮಗನಿಗೆ ಹೇಳುವ ಸಂದರ್ಭ ಭಾವನಾತ್ಮಕವಾಗಿದೆ.

ನೀವು ನೆಮ್ಮದಿಯಾಗಿದದ್ದನ್ನು ನಾ ಎಂದೂ ಕಂಡಿಲ್ಲ ಎನ್ನುವ ಪತ್ನಿ ಮಾತಿಗೆ, 'ನೊಂದ್ಕೊಳ್ಳದಿದ್ರೆ ಕವಿತೆ ಹುಟ್ಟುತ್ತಾ? ನೆಮ್ಮದಿಯಿದ್ರೆ ಕವಿ ಕವಿತೆ ಹೇಗೆ ಬರೆಯುತ್ತಾನೆ' ಎನ್ನುತ್ತಾರೆ. ಕೆಲಸದಲ್ಲಿನ ಪ್ರಾಮಾಣಿಕತೆ, ಸತ್ಯವಾಗಿ ಬದುಕಿದ ಹೆಮ್ಮೆ ಅವರ ಮಾತಲ್ಲಿ ಎದ್ದು ಕಾಣುತ್ತದೆ. ತಮ್ಮ ಬಡತನಕ್ಕೆ ಯಾರನ್ನೂ ಹೊಣೆ ಮಾಡದ ಅವರು, ಕಷ್ಟದಿಂದ ಹಣ್ಣಾಗುತ್ತಾರೆ. 'ಸರಕಾರವನ್ನು ಕೇಳೋದು ಹೇಗೆ? ನಾ ಕೇಳಲಾರೆ. ಮಗನಿಗೆ ನಾ ಏನನ್ನೂ ನೀಡಲಿಲ್ಲ. ಈಗ ನಾ ಹೇಗೆ ಕೈವೊಡ್ಡಲಿ' ಎನ್ನುವ ಮಲ್ಲಿಗೆ ಕವಿ ತಮ್ಮ ಸ್ವಾಭಿಮಾನ ಪ್ರದರ್ಶಿಸುತ್ತಾರೆ. ಈ ದೃಶ್ಯಗಳು ನೋಡುಗರ ಕಣ್ಣನ್ನು ತೇವಗೊಳಿಸುತ್ತವೆ. ಆ ಮಧ್ಯೆ ನೋವಿನಲ್ಲೂ ಕವಿ ಮತ್ತು ಅವರ ಪತ್ನಿ ನಲಿವನ್ನು ಕಾಣುತಾರೆ. ಅವರಿಬ್ಬರ ನಡುವಿನ ಸರಸ ಸಂಭಾಷಣೆ, ಮುದ್ದಣ ಮನೋರಮೆಯರನ್ನು ನೆನಪಿಸುತ್ತದೆ.

ಕೇವಲ 5000 ರೂ.ಗಳಿಗೆ ತಮ್ಮ ಸಮಗ್ರ ಕಾವ್ಯದ ಹಕ್ಕುಗಳನ್ನು ಪಡೆದ ಪ್ರಕಾಶಕರ ಬಗ್ಗೆ ಕವಿಗೆ ಒಂದಿಷ್ಟೂ ಸಿಟ್ಟಿಲ್ಲ. ಒಳ್ಳೆ ಸಮಯದಲ್ಲಿ ಹಣ ನೀಡಿ ಉಪಕಾರ ಮಾಡಿದಿರಿ ಎನ್ನುತ್ತಾರೆ. ವಿಮರ್ಶಕರ ಬಗ್ಗೆ ಅಸಹನೆ ಹೊಂದಿರುವ ಕವಿ, ಪತ್ನಿಯನ್ನು ಶ್ರೇಷ್ಠ ವಿಮರ್ಶಕಿ ಅನ್ನುತ್ತಾರೆ. ಬದುಕಿದ್ದಾಗಲೇ ಸಾವಿನ ಸುದ್ದಿ ಪ್ರಕಟವಾದದ್ದನ್ನು ಕಂಡು ನೊಂದುಕೊಳ್ಳುತ್ತಾರೆ. ನಾನು ಸತ್ತ ನಂತರ, ಜನರು ನನ್ನನ್ನು ನೆನಪಲ್ಲಿಟ್ಟುಕೊಳ್ತಾರಾ ಎಂಬ ಅನುಮಾನ ಸಹಾ ಎಲ್ಲೋ ಒಂದು ಮೂಲೆಯಲ್ಲಿ. ಈ ಅಂಶಗಳ ಜತೆಗೆ ನಾಟಕದಲ್ಲಿ ನೆನಪಲ್ಲಿ ಉಳಿಯುವ ಎರಡು ಮುಖ್ಯ ದೃಶ್ಯಗಳಿವೆ. ವೇದಿಕೆ ಮೇಲೆಯೇ ಹಳೆಯ ಮದುವೆ ದಿಬ್ಬಣ ನೆನಪಿಸುವ ದೃಶ್ಯವಂತೂ ಕಣ್ಣಿಗೆ ಹಬ್ಬ. 'ಎಲ್ಲಿದ್ದಿಯೇ ಮೀನಾ' ಪದ್ಯದ ಬಳಕೆ ದೃಶ್ಯಕಾವ್ಯವಾಗಿ ನೆನಪಲ್ಲಿ ನಿಲ್ಲುತ್ತದೆ. ಮನೆ ಇಷ್ಟಪಡುವವರಿಗೆ ಮೈಸೂರು ಮಲ್ಲಿಗೆ ಇಷ್ಟವಾಗುತ್ತದೆ. ಪಾಪ್ ಇಷ್ಟಪಡುವವರಿಗೆ ನರಸಿಂಹಸ್ವಾಮಿ ಅರ್ಥವಾಗುವುದಿಲ್ಲ.

ಈ ಎರಡು ದಿನಗಳು ಎರಡು ನಾಟಕಗಳು ನೂರಾರು ಕನ್ನಡಿಗರ ಮನದಲ್ಲಿ ಕೊನೆವರೆಗು ಜಾಗ ಮಾಡಿಕೊಂಡು ಕುಳಿತುಕೊಂಡವು. ನಿಜವಾದ ಜೀವನ ಶೈಲಿಯನ್ನು ಮರೆತು ಮತ್ಯಾವುದೊ ಜೀವನ ಶೈಲಿಗೆ ಮಾರು ಹೋಗುತ್ತಿರುವ ಈಗಿನ ಪೀಳಿಗೆಗೆ ಒಂದು ಚಾಟಿಯ ಏಟು ಕೊಟ್ಟಂತ್ತಿತ್ತು. ಅಂತಹ ಮಹಾನ್ ಕವಿಗಳ ನಿಜ ಜೀವನದ ಬಗ್ಗೆ ನಾಟಕದ ಮೂಲಕ ನಟಿಸಿ, ಪುಸ್ತಕಗಳನ್ನು ಹಿಡಿಯದ ಈಗಿನ ಕಾಲದ ಯುವಜನತೆಗೆ ಅರ್ಥಮಾಡಿಸಲೆಂದೇ ರಾಜೇಂದ್ರ ಕಾರಂತರು ಹಾಗು ತಂಡದವರು ತಮ್ಮ ಜೀವನವನ್ನು ಮುಡುಪಾಗಿಟ್ಟು ನಮ್ಮೆಲ್ಲರಿಗು ನಿಜ ಜೀವನದ ಬಗ್ಗೆ ಅರ್ಥಮಾಡಿಸುತಿದ್ದಾರೆ. ಅ

*ತಿಮ್ಮಪ್ಪ ಜಿ ಆರ್.*

# ದೆಹಲಿಯಲ್ಲಿ ಮೂರು ದಿನಗಳ ಕನ್ನಡ ಚಲನ ಚಿತ್ರೋತ್ಸವ

**ಕನ್ನಡ ಚಲನಚಿತ್ರೋತ್ಸವಗಳಲ್ಲಿ ಕನ್ನಡ ಚಿತ್ರಗಳೊಂದಿಗೆ ಪ್ರಾದೇಶಿಕ ಭಾಷೆಗಳಾದ ಕೊಂಕಣಿ, ತುಳು, ಕೊಡವ ಇನ್ನಿತರ ಭಾಷೆಗಳ ಚಲನಚಿತ್ರಗಳನ್ನೂ ಸಹ ಪ್ರದರ್ಶಿಸು ವಂತಾಗಬೇಕು**

ಇದೇ ಏಪ್ರಿಲ್ 16, 17 ಮತ್ತು 18ರಂದು ದೆಹಲಿಯ ಸಿರಿಫೋರ್ಟ್ ಸಭಾಂಗಣದಲ್ಲಿ ಮೂರು ದಿನಗಳ ಕಾಲ ಕನ್ನಡ ಚಲನಚಿತ್ರೋತ್ಸವವು ಬಹಳ ಯಶಸ್ವಿಯಾಗಿ ನಡೆಯಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಚಲನಚಿತ್ರ ಅಕಾಡೆಮಿ, ಭಾರತ ಸರ್ಕಾರದ ಚಲನಚಿತ್ರೋತ್ಸವ ನಿರ್ದೇಶನಾಲಯ ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಏರ್ಪಟ್ಟ ಈ ಉತ್ಸವದಲ್ಲಿ ಪ್ರತಿದಿನ ಮೂರು ಸಿನಿಮಾಗಳಂತೆ ಒಟ್ಟು 9 ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸಲಾಯಿತು. ಮೊದಲನೆ ದಿನ ರಾಮರೆಡ್ಡಿ ನಿರ್ದೇಶನದ 'ತಿಥಿ', ಬಿ.ಎಸ್. ಲಿಂಗದೇವರು ನಿರ್ದೇಶನದ 'ನಾನು ಅವನಲ್ಲ ಅವಳು', ಅನುಪ್ ಭಂಡಾರಿ ನಿರ್ದೇಶನದ 'ರಂಗಿ ತರಂಗ' ಚಲನಚಿತ್ರಗಳು ಪ್ರದರ್ಶನಗೊಂಡವು. ಎರಡನೇ ದಿನ ಮನ್ಸೂರೆ ನಿರ್ದೇಶನದ 'ಅರಿವು', ಪಿ.ಶೇಷಾದ್ರಿ ನಿರ್ದೇಶನದ 'ವಿದಾಯ' ಹಾಗೂ ಶಶಾಂಕ್ ನಿರ್ದೇಶನದ 'ಕೃಷ್ಣ ಲೀಲಾ' ಪ್ರದರ್ಶನಗೊಂಡವು. ಹಾಗೂ ಕೊನೆಯ ದಿನ ಸಂತೋಷ್ ಆನಂದರಾಮ್ ನಿರ್ದೇಶನದ 'Mr. & Mrs. ರಾಮಾಚಾರಿ', ನರೇಶ್‌ಕುಮಾರ್ ಎಚ್.ಎನ್. ನಿರ್ದೇಶನದ 'Ist ರ್‍ಯಾಂಕ್ ರಾಜು', ಮತ್ತು ಪಿ. ವಾಸು ನಿರ್ದೇಶನದ 'ಶಿವಲಿಂಗ' ಚಲನಚಿತ್ರಗಳು ಪ್ರದರ್ಶನಗೊಂಡವು.

ಏಪ್ರಿಲ್ 16ರಂದು ಈ ಚಲನಚಿತ್ರೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀ ಅತುಲ್ ಕುಮಾರ್ ತಿವಾರಿ ಅವರು ಮಾತನಾಡಿ, ಕನ್ನಡ ಭಾಷೆ, ಕಲೆ, ಸಂಸ್ಕೃತಿ, ಪರಂಪರೆಯನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ಹೆಚ್ಚಿನ ಪ್ರಮಾಣದಲ್ಲಿ ದೆಹಲಿಯಲ್ಲಿ ಏರ್ಪಡಿಸಬೇಕಾಗಿದೆ. ಚಲನಚಿತ್ರ ಕ್ಷೇತ್ರವು ಅತ್ಯಂತ ಪ್ರಭಾವಶಾಲಿ ಮಾಧ್ಯಮವಾಗಿದ್ದು ಇದು ಕನ್ನಡ ಭಾಷೆ, ಕಲೆ ಸಾಹಿತ್ಯವನ್ನು ಪ್ರೋತ್ಸಾಹಿಸುತ್ತದೆ ಎಂದು ನುಡಿದರು.

ಭಾರತ ಸರ್ಕಾರದ ಚಲನಚಿತ್ರೋತ್ಸವ ನಿರ್ದೇಶನಾಲಯದ ಸಂಚಾಲಕರಾದ ಶ್ರೀ ಸಿ. ಸೆಂಥಿಲ್ ರಾಜನ್ ಅವರು ಮಾತನಾಡುತ್ತ ದೆಹಲಿಯಲ್ಲಿ ಇಂತಹ ಚಲನಚಿತ್ರೋತ್ಸವವನ್ನು ಏರ್ಪಡಿಸುವುದರಿಂದ ಕನ್ನಡ ಭಾಷೆಯು ಪುನರ್‌ಜೀವನಗೊಂಡು ಯುವ ಪೀಳಿಗೆಗೆ ಭಾಷೆಯನ್ನು ಬೆಳೆಸಲು ನೆರವಾಗುತದೆ ಎಂದು ತಿಳಿಸಿದರು. ರಾಜ್ಯಪ್ರಶಸ್ತಿ ವಿಜೇತ ಚಲನಚಿತ್ರ ನಟ ಶ್ರೀ ಸಂಚಾರಿ ವಿಜಯ್ ಅವರು ಮಾತನಾಡುತ್ತ ಕನ್ನಡ ಚಲನಚಿತ್ರಗಳು ದೇಶದ ಎಲ್ಲೆಡೆ ಪ್ರದರ್ಶನಗೊಂಡು ಕನ್ನಡದ ಮಹತ್ವ ಮತ್ತು ಕಂಪು ದೇಶದಾದ್ಯಂತ ಹರಡುವಂತಾಗಬೇಕೆಂದು ಹರಿಸಿದರು.

ಹಿರಿಯ ಪತ್ರಕರ್ತ ಶ್ರೀ ಡಿ. ಉಮಾಪತಿ ಅವರು ಮಾತನಾಡಿ, ಕನ್ನಡ ಚಲನಚಿತ್ರಗಳು ಹೆಣ್ಣು ಭ್ರೂಣ ಹತ್ಯೆ, ಜಾತಿ ಪದ್ಧತಿಗಳಂತಹ ಜಟಿಲ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವಂತಹ ಸಂವೇದನಾಶೀಲ ಸಮಾಜಿಕ ಕಳಕಳಿಯುಳ್ಳ ಚಲನಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ತಯಾರಾಗುವುದರ ಜೊತೆಗೆ ಹೆಚ್ಚು ಹೆಚ್ಚಾಗಿ ಚಲನಚಿತ್ರ ಮಂದಿರಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುವಂತಾಗಬೇಕು ಎಂದು ತಿಳಿಸಿದರು. ಕರ್ನಾಟಕದಲ್ಲಿ ಪರಭಾಷಾ ಮೋಹಕ್ಕೊಳಗಾಗಿ ಕನ್ನಡ ಚಲನಚಿತ್ರಗಳು ಸೊರಗುತ್ತಿರುವುದನ್ನು ದೂರ ಮಾಡುವಲ್ಲಿ ಸರ್ಕಾರವೂ ಸೇರಿದಂತೆ ಎಲ್ಲರೂ ಒಂದಾಗಿ ಹೋರಾಡಬೇಕಾಗಿದೆ ಎಂದು ಅವರು ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ ಇಂತಹ ಕನ್ನಡ ಚಲನಚಿತ್ರೋತ್ಸವಗಳಲ್ಲಿ ಕನ್ನಡ ಚಿತ್ರಗಳೊಂದಿಗೆ ಪ್ರಾದೇಶಿಕ ಭಾಷೆಗಳಾದ ಕೊಂಕಣಿ, ತುಳು, ಕೊಡವ ಇನ್ನಿತರ ಭಾಷೆಗಳ ಚಲನಚಿತ್ರಗಳನ್ನೂ ಸಹ ಪ್ರದರ್ಶಿಸುವಂತಾಗಬೇಕು ಎಂದು ನುಡಿದರು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಹಾಗೂ ಸುಪ್ರಸಿದ್ಧ ನಿರ್ದೇಶಕ ಶ್ರೀ ಎಸ್.ವಿ. ರಾಜೇಂದ್ರಸಿಂಗ್ ಬಾಬು ಕನ್ನಡ ಚಲನಚಿತ್ರ ಪರಂಪರೆಯು ಇನ್ನಷ್ಟು ಉತ್ಕೃಷ್ಟವಾಗಿ ಬೆಳೆಯುವಂತಾಗಲು ರಾಜ್ಯದಲ್ಲಿ ಪರಭಾಷೆಯ ಚಲನಚಿತ್ರಗಳ ಭರಾಟೆಯನ್ನು ಹತೋಟಿಯಲ್ಲಿಟ್ಟು ಕನ್ನಡ ಭಾಷೆಯ ಸಿನಿಮಾಗಳಿಗೆ ಪ್ರೋತ್ಸಾಹ ನೀಡುವಂತಾಗಬೇಕು, ಕನ್ನಡದ ಯಶಸ್ವೀ ಹಾಗೂ ಪ್ರಶಸ್ತಿ ಪಡೆದ ಚಲನಚಿತ್ರಗಳನ್ನು ಹೊರರಾಜ್ಯಗಳಲ್ಲಿ ಇಂತಹ ಕನ್ನಡ ಚಲನಚಿತ್ರಗಳನ್ನು ಚಲನಚಿತ್ರೋತ್ಸವಗಳ ಮುಖಾಂತರ ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕರ್ನಾಟಕ ಭವನದ ಉಪನಿವಾಸಿ ಆಯುಕ್ತರಾದ ಶ್ರೀಮತಿ ಅನೀಸ್ ಕೆ. ಜಾಯ್, ಹೆಸರಾಂತ ಬರಹಗಾರರಾದ ಪ್ರೊ. ಎಚ್. ಎಸ್. ಶಿವಪ್ರಕಾಶ್, ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ನಿರ್ದೇಶಕರಾಗಿರುವ ಶ್ರೀ ವಿ. ಶೇಷಾದ್ರಿ, ಸಮನ್ವಯಧಿಕಾರಿ ಶ್ರೀ ಕೆ. ಶಿವರಾಮ್ ಉಪಸ್ಥಿತರಿದ್ದರು. ಕನ್ನಡ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಚ್.ವಿ. ದಿನೇಶ್ ಸ್ವಾಗತಿಸಿದರು. ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿಯ ಉಪ ನಿರ್ದೇಶಕ (ಪ್ರ)ರಾದ ಶ್ರೀ ಎಚ್. ಶ್ರೀನಿವಾಸ ಅವರು ಧನ್ಯವಾದ ಸಮರ್ಪಿಸಿದರು. ಈ ಎಲ್ಲಾ ಮೂರು ದಿನಗಳ ಚಲನಚಿತ್ರೋತ್ಸವದಲ್ಲಿ ನೂರಾರು ಮಂದಿ ಕನ್ನಡಿಗರು ಹಾಗೂ ಕನ್ನಡೇತರರು ಜೊತೆಯಾಗಿ ಎಲ್ಲ ಚಲನಚಿತ್ರಗಳನ್ನು ನೋಡಿ ಆನಂದಿಸಿದರು. ಚಿತ್ರೋತ್ಸವ ನಡೆದ ಮೂರು ದಿನಗಳೂ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಅ

***ಸಖಾರಾಮ ಉಪ್ಪೂರು***





# ಸಂಘದ ವಾರ್ಷಿಕೋತ್ಸವ

ದೆಹಲಿ ಕರ್ನಾಟಕ ಸಂಘದ 2015–16ನೇ ಸಾಲಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಲು ದೆಹಲಿ ಆಗಮಿಸಿದ್ದ ಪಂಡಿತ್ ವೆಂಕಟೇಶ್ ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕರ್ನಾಟಕದ ಪ್ರಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಅವರಿಗೆ ಈ ಬಾರಿಯ ಪದ್ಮಶ್ರೀ ಪ್ರಶಸ್ತಿ ಬಂದಿರುವುದು ಕನ್ನಡಿಗರಾದ ನಮಗೆಲ್ಲರಿಗೂ ಒಂದು ಬಹುದೊಡ್ಡ ಹೆಮ್ಮೆಯ ಗೌರವದ ಕ್ಷಣ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಹೇಳಿದರು. ಇವರನ್ನು ಇದೇ ಸಂದರ್ಭದಲ್ಲಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದಿಸಿ ಗೌರವಿಸುತ್ತ ಕರ್ನಾಟಕದ ಹೆಸರಾಂತ ಹಿಂದೂಸ್ತಾನಿ ಗಾಯಕರ ಸಾಲಿನಲ್ಲಿ ಪಂಡಿತ್ ಕುಮಾರ ಗಂಧರ್ವ, ಪಂಡಿತ್ ಭೀಮಸೇನ್ ಜೋಷಿ, ಪಂಡಿತ್ ಗಂಗೂಬಾಯಿ ಹಾನಗಲ್ ಮತ್ತೊಂದು ಮಹತ್ವಪೂರ್ಣ ಹೆಸರು ಪಂಡಿತ್ ವೆಂಕಟೇಶ್ ಕುಮಾರ್ ಅವರದ್ದು.

ಅತ್ಯಂತ ಸಾಧಾರಣ ಮತ್ತು ಸರಳ ಹಿನ್ನೆಲೆಯಿಂದ ಬಂದ ಪಂಡಿತ್ ವೆಂಕಟೇಶ್ ಕುಮಾರ್ ಅವರು ಪಂಡಿತ್ ಪುಟ್ಟರಾಜ ಗವಾಯಿ ಅವರ ಗರಡಿಯಲ್ಲಿ ಸತತವಾಶಗಿ 12ವರ್ಷಗಳ ಕಾಲ ಹಿಂದೂಸ್ತಾನಿ ಸಂಗೀತವನ್ನು ಮೈಗೂಡಿಸಿಕೊಂಡು ಕರ್ನಾಟಕ ರಾಜ್ಯ ಮತ್ತು ದೇಶದ ವಿವಿಧ ಪ್ರದೇಶಗಳಲ್ಲಿ ಈಗಾಗಲೇ ತಮ್ಮ ದೈವದತ್ತವಾದ ಸುಶ್ರಾವ್ಯವಾದ ಕಂಠಶ್ರೀಯಿಂದ ಹಾಗೂ ಶೈಲಿ ಮೂಲಕ ಗ್ವಾಲಿಯರ್ ಮತ್ತು ಖಿರಾನ ಘರಾಣ ಶೈಲಿಯ ಸಂಗೀತವನ್ನು ಸಾವಿರಾರು ಜನರಿಗೆ ಉಣಬಡಿಸಿದ್ದಾರೆ. ಇಂತಹ ಮಹಾನ್ ಹಿಂದೂಸ್ತಾನಿ ಗಾಯಕರ ಅಪ್ರತಿಮ ಪ್ರತಿಭೆ ಹಾಗೂ ಸಾಧನೆಯನ್ನು ಗುರುತಿಸಿ ಕರ್ನಾಟಕ ಸರ್ಕಾರವು 1999ರಷ್ಟು ಹಿಂದೆಯೇ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. ಇದಲ್ಲದೆ ಪಂಡಿತ್ ವೆಂಕಟೇಶ್ ಕುಮಾರ್ ಅವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ





**ಸಾಂಸ್ಕೃತಿಕ ಸ್ಪರ್ಧೆಗಳ ಫಲಿತಾಂಶ**

**ಭಕ್ತಿಗೀತೆ :** (10–18ವರ್ಷ) 1. ಪ್ರೇರಣಾ ರಾವ್ 2. ಮೇಘಾ ಕಿಣಿ 3. ಜಾಹ್ನವಿ

**ಭಾವಗೀತೆ :** (10–18ವರ್ಷ) 1. ಪ್ರೇರಣಾ ರಾವ್ 2. ಜಾಹ್ನವಿ 3. ರಮ್ಯ ಎಂ.ಎಸ್., **ಜಾನಪದ ಗೀತೆ :** (10–18ವರ್ಷ) 1. ಮೇಘಾ ಕಿಣಿ 2. ಜಾಹ್ನವಿ 3. ವರ್ಷಾ ಕಿಣಿ, **ಚಲನಚಿತ್ರ ಗೀತೆ :** (10–18ವರ್ಷ) 1. ಜಾಹ್ನವಿ 2. ಪ್ರೇರಣಾ ರಾವ್ 3. ಅಭಿಷೇಕ್ ಎಸ್., **ಭಕ್ತಿಗೀತೆ :** (18ವರ್ಷಕ್ಕಿಂತ ಮೇಲ್ಪಟ್ಟವರು) 1. ಮಮತಾ ಪಿ. 2. ಮಮತಾ ಶಿವರಾಮ್ 3. ಮಂಜುಳಾ ನಾಗರಾಜ

**ಭಾವಗೀತೆ :** (18ವರ್ಷಕ್ಕಿಂತ ಮೇಲ್ಪಟ್ಟವರು) 1. ಮಮತಾ ಪಿ 2. ಚಿದಂಬರ ಕೋಟೆ 3. ಮಂಜುಳಾ ನಾಗರಾಜ, **ಜಾನಪದ ಗೀತೆ :** (18ವರ್ಷಕ್ಕಿಂತ ಮೇಲ್ಪಟ್ಟವರು) 1. ಗಿರೀಶ್ ಎಸ್ 3. ಮಮತಾ ಪಿ 3. ಮಂಜುಳಾ ನಾಗರಾಜ

**ಚಲನಚಿತ್ರ ಗೀತೆ :** (18ವರ್ಷಕ್ಕಿಂತ ಮೇಲ್ಪಟ್ಟವರು) 1. ಮಮತಾ ಪಿ 2. ಗಿರೀಶ್ ಎಸ್ 3. ಚಿದಂಬರ ಕೋಟೆ, **ಕಾಮಿಡಿ :** 1. ಶಿವಪ್ಪ ಎಂ 2. ಗಿರೀಶ್ ಎಸ್

ಛದ್ಮವೇಷ : (6ವರ್ಷಕ್ಕಿಂತ ಕೆಳಗಿನವರು) 1. ಸೃಜನ್ 2. ಸೂಷ್ಮ ನಿಂಬಲ್ 3. ಸೃಷ್ಟಿ, **ಕನ್ನಡ ಪದ್ಯ :** (6ವರ್ಷಕ್ಕಿಂತ ಕೆಳಗಿನವರು) 1. ಭಕ್ತಿ 2. ಸುನಿತಾ 3. ಜೀವನ್, **ಪದ್ಯ ವಾಚನ :** (7–10 ವರ್ಷ) 1. ಹಿತಶ್ರೀ 2. ಲಕ್ಷ್ಮಿ ನಾಗರಾಜ 3. ಮಧುಸೂಧನ, **ಗದ್ಯ ವಾಚನ :** (7–10 ವರ್ಷ) 1. ಶ್ರೇಯಾ ತೇಲಿ 2. ಸೌಮ್ಯಶ್ರೀ 3. ಲಕ್ಷ್ಮಿ ನಾಗರಾಜ, **ಸ್ಮರಣ ಶಕ್ತಿ :** (10 ವರ್ಷಕ್ಕಿಂತ ಕೆಳಗಿನವರು) 1. ಶ್ರೇಯಾ ತೇಲಿ 2. ಡಿ. ಚೈತನ್ಯ 3. ಎಂ. ಪ್ರಮೋದ್ ಕುಮಾರ್


**ಸ್ಮರಣ ಶಕ್ತಿ :** (9–13ವರ್ಷ) 1. ಗೌತಮ್ ಆರ್ 2. ರಮ್ಯ ಎಂ.ಎಸ್. 3. ಶ್ರೇಷ್ಠಾ ತೇಲಿ, **ಸ್ಮರಣ ಶಕ್ತಿ :** (13–18 ವರ್ಷ) 1. ಅನನ್ಯ 2. ನವಯುಗ್ **ಡ್ರಾಯಿಂಗ್ :** (10 ವರ್ಷಕ್ಕಿಂತ ಕೆಳಗಿನವರು) 1. ಪ್ರಮೋದ್ ಕುಮಾರ್ 2. ಹರ್ಷಿತಾ ಕುಲಕರ್ಣಿ 3. ಸೂಷ್ಮ ನಿಂಬಲ್, **ಡ್ರಾಯಿಂಗ್ :** (10–18ವರ್ಷ) 1. ಮಹೇಶ್ ನಿಂಬಲ್ 2. ಅನನ್ಯಾ ನಾಗರಾಜ 3. ಕೆ.ಎನ್. ಭಾಗ್ಯಶ್ರೀ **ಕ್ಲಾಸಿಕಲ್ ಡಾನ್ಸ್ :** 1. ಪ್ರೇರಣಾ ರಾವ್ 2. ಮೇಘಾ ಕಿಣಿ 3. ರಮ್ಯ ಎಂ.ಎಸ್. ತೀರ್ಪುಗಾರರ ಬಹುಮಾನ : ವಾಸುಕಿ ದೇಶಪಾಂಡೆ, **ಮೋಡರ್ನ್ ಡಾನ್ಸ್ :** 1. ಹಿತಶ್ರೀ 2. ಧನುಷ್ ಗೌಡ 3. ಪೃಥ್ವಿ ಕಟ್ಟೀಮನಿ, **ಗ್ರೂಪ್ ಡಾನ್ಸ್ :** 1. ರಂಗ ತರಂಗ ಚಿಣ್ಣರ ತಂಡ 2. ಕರ್ನಾಟಕ ಭವನ, ಫೇಸ್ –1 (ಹುಡುಗಿಯರು) 3. ಭೂಮಿಕಾ ಮತ್ತು ತಂಡ ತೀರ್ಪುಗಾರರ ಬಹುಮಾನ : ಸಂಚಿತಾ

**ರಂಗೋಲಿ :** 1. ಮೈಥಿಲಿ ಅತ್ತಾವರ 2. ಪ್ರೇಮಾ ಗೌಡ 3. ಆರತಿ ಸಂಜೀವ್





# ವಿದ್ಯಾರ್ಥಿ ವೇತನ 2015-16 ಅರ್ಹತೆ ಮತ್ತು ಅವಶ್ಯಕತೆಯ ಆಧಾರದ ಮೇಲೆ




**ಅರ್ಹತೆಯ ಆಧಾರದ ಮೇಲೆ :** ಸೂಕ್ಷ್ಮ ನಿಂಬಲ್ (1ನೇ ತರಗತಿ), ಅರವಿಂದ್ ಕುಮಾರ್ ಬಿರಾದಾರ (2ನೇ), ಆದಿಶ್ರೀ ಗೌಡ (3ನೇ) ಆಶೀರ್ವಾದ್ ಪೂಜಾರಿ (4ನೇ), ಎಸ್. ಭುವನ್ (5ನೇ), ರಬಿಯತ್ ಬಾನು (5ನೇ), ಶ್ರೇಷ್ಠಾ ತೇಲಿ (6ನೇ)
ಪ್ರವೀಣ್ ಬಿ (7ನೇ), ಮಹೇಶ್ ಕುಮಾರ್ ನಿಂಬಲ್ (8ನೇ), ಸಿ. ಪುನೀತ್–ದಿ. ನರಹರಿ ರಾವ್, ಸ್ಮರಣಾರ್ಥ (9ನೇ), ಕೆ. ದೀಪ್ತಿಕಾ ಗಣೇಶ್–ದಿ. ಡಾ. ವಿ.ಕೆ.ಆರ್.ವಿ. ರಾವ್ ಸ್ಮರಣಾರ್ಥ (10ನೇ), ಹೇಮಂತ್ ಕುಮಾರ್ ಭಾರದ್ವಾಜ್–ದಿ. ಎ.ಪಿ. ಕುಮಟಾಕರ್ ಸ್ಮರಣಾರ್ಥ (10ನೇ), ಅಮನ್ ಪಿ. ಶೆಟ್ಟಿ–ದಿ. ಎ.ವಿ. ಸ್ಮರಣಾರ್ಥ (12ನೇ), ಬಿ.ಎನ್. ದೀಪಾಂಕನ್–ದಿ. ರಾಘವನ್ (ಬಿ.ಟೆಕ್), ಪ್ರಸನ್ನ ಬಿರಾದಾರ–ದಿ. ಎಸ್.ವಿ. ಕೃಷ್ಣಮೂರ್ತಿ ರಾವ್ ಸ್ಮರಣಾರ್ಥ (ಬಿ.ಎ.ಎಲ್.ಎಲ್.ಬಿ), ಪ್ರಶಾಂತ್ ಬಿರಾದಾರ–ದಿ. ಜಿ.ವೈ. ಕೃಷ್ಣನ್ (ಬಿ.ಟೆಕ್), ವಿ. ಪ್ರಹಾರಿಕ–ದಿ. ಗೋಪಾಲ ಶಾಸ್ತ್ರಿ ಸ್ಮರಣಾರ್ಥ (ಪದವಿ)
**ಅರ್ಹತೆಯ ಆಧಾರದ ಮೇಲೆ** ಮಧುಸೂದನ್ ಸಿ. ಪೂಜಾರಿ (1ನೇ ತರಗತಿ), ಸುಮಂತ್ (1ನೇ), ರೋಹನ್ ರಂಗನಾಥ್ (4ನೇ), ದಕ್ಷ್ ಪೂಜಾರಿ ಮತ್ತು ಧ್ರುವ್ ಪೂಜಾರಿ–ದಿ.ಕೆ.ಆರ್. ನಾಗರಾಜ ಸ್ಮರಣಾರ್ಥ (4ನೇ), ಮಧು ಜಿ (8ನೇ), ಶ್ರೇಯಾ (10ನೇ), ಅನ್ನಪೂರ್ಣೇಶ್ವರಿ ಪಿ. ರಿತಿ (10ನೇ), ಶ್ವೇತಾ ಜಿ (11ನೇ)

(2007) ವತ್ಸಲ ಭೀಮ್‌ಸೇನ್ ಜೋಷಿ ಪ್ರಶಸ್ತಿ (2008), ಕೃಷ್ಣ ಹಾನಗಲ್ ಪ್ರಶಸ್ತಿ (2009), ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (2012) ಕರ್ನಾಟಕ ಯುನಿವರ್ಸಿಟಿ ಧಾರವಾಡದ ಗೌರವ ಡಾಕ್ಟರೇಟ್ ಪದವಿ (2014) ಹಾಗೂ ಇದೀಗ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಪಂಡಿತ್ ವೆಂಕಟೇಶ್ ಕುಮಾರ್ ಅವರು ದೆಹಲಿಗೆ ಬಂದು ಇಳಿಯುತ್ತಿದ್ದಂತೆ ಸ್ವಾಗತಿ, ಅಭಿನಂದಿಸಿದ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ ತನ್ನ ಅನಂತ ಅನಂತ ಧನ್ಯವಾದಗಳು ಎಂದು ಸಂತಸ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾದ ಪಂಡಿತ್ ವೆಂಕಟೇಶ್ ಕುಮಾರ್ ಮತ್ತು ಪ್ರಖ್ಯಾತ ಬಾಸ್ಕೆಟ್‌ಬಾಲ್ ಆಟಗಾರ್ತಿ ಶ್ರೀಮತಿ ಆಶಾ ಹೆಗ್ಡೆ ಅವರು ಸಂಘವು ಏರ್ಪಡಿಸಿದ್ದ ವಾರ್ಷಿಕ ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿ, ಆಹಾರ ಮೇಳ ಮತ್ತು 2015–16ನೇ ಸಾಲಿನ ವಿದ್ಯಾರ್ಥಿ ವೇತನವನ್ನು ವಿತರಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ, ಶ್ರೀ ಸಿ.ಎಂ. ನಾಗರಾಜ ಅವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಭಾ ಕಾರ್ಯಕ್ರಮದ ನಂತರ ಶ್ರೀಮತಿ ಶುಭಾಂಗಿ ತಂಡದಿಂದ ತರಬೇತಿ ಪಡೆದ ಸ್ಥಳೀಯ ಕಲಾವಿದರಿಂದ ವಿವಿಧ ನೃತ್ಯಕಾರ್ಯಕ್ರಮಗಳು ನಡೆದವು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀಮತಿ ಪೂಜಾ ಪಿ. ರಾವ್. ಅವರು ನಡೆಸಿಕೊಟ್ಟರು.

ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಸಹಕರಿಸಿದ ಶ್ರೀಮತಿ ಶ್ಯಾಮಲಾ ಮನೋಹರ್ ರಾವ್, ಶ್ರೀಮತಿ ಶುಭಾ, ಶ್ರೀಮತಿ ಶುಭಾಂಗಿ ಗುಲಬರ್ಗಾ, ಶ್ರೀ ಮನೋಹರ ರಾವ್, ಶ್ರೀ ಚೆನ್ನು ಎಸ್. ಮಠದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಅವರು ವಿದ್ಯಾರ್ಥಿ ವೇತನ ವಿತರಣೆಯನ್ನು ಆಟೋಟ ಸ್ಪರ್ಧೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣೆ ಡಾ. ಎಂ.ಎಸ್. ಶಶಿಕುಮಾರ್ ಮತ್ತು ಪ್ರೊ. ಸಖಾರಾಮ ಉಪ್ಪೂರು, ಫುಡ್ ಫೆಸ್ಟಿವಲ್‌ನ ಬಹುಮಾನ ವಿತರಣೆಯನ್ನು ಶ್ರೀಮತಿ ಜಮುನಾ ಸಿ. ಮಠದ ಮತ್ತು ಶ್ರೀ ರಾಧಾಕೃಷ್ಣ, ಅವರು ನಡೆಸಿಕೊಟ್ಟರು. ಶ್ರೀ ಕೆ.ಎಸ್.ಜಿ. ಶೆಟ್ಟಿ, ಖಜಾಂಚಿ, ಸದಸ್ಯರುಗಳಾದ ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ಸುಮಿತಾ ಮುರಗೋಡ, ಶ್ರೀ ವಿ.ವಿ. ಬಿರಾದಾರ, ಶ್ರೀ ಶಶಿಕಾಂತ ಪಾಟೀಲ್ ಅವರು ಹಾಜರಿದ್ದರು. ಅ

*ಸಖಾರಾಮ ಉಪ್ಪೂರು*









# ರಾಜಧಾನಿಯಲ್ಲಿ ಹರಿದ ಗಾನಸುಧೆ- ಪದ್ಮಶ್ರೀ ಪಂಡಿತ್ ವೆಂಕಟೇಶ್ ಕುಮಾರ್




ಭಾರತ ಸರ್ಕಾರದ ಉನ್ನತ ನಾಗರಿಕ ಪುರಸ್ಕಾರವಾಗಿರುವ 'ಪದ್ಮಶ್ರೀ' ಪ್ರಶಸ್ತಿ ಸ್ವೀಕರಿಸಿದ ಖ್ಯಾತ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಪಂಡಿತ ವೆಂಕಟೇಶ ಕುಮಾರ್ ಅವರು ದಿಲ್ಲಿಯ ಸಾಂಸ್ಕೃತಿಕ ಕೇಂದ್ರವಾದ ಮಂಡೀ ಹೌಸ್‌ನ ಲಿಟ್ಲ್ ಥಿಯೇಟರ್ ಗ್ರೂಪ್ ಸಭಾಂಗಣದಲ್ಲಿ ಇದೇ ಏಪ್ರಿಲ್ 13ರಂದು ಆಯೋಜಿಸಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸಂಗೀತ ಕಚೇರಿ ನಡೆಸಿ ಸಂಗೀತಾಸಕ್ತರ ಮನತಣಿಸಿದರು.

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೊಡನೆ ದೆಹಲಿ ಕರ್ನಾಟಕ ಸಂಘವು ಕೈಜೋಡಿಸಿ ಕನ್ನಡೇತರರು ಮತ್ತು ಕನ್ನಡಿಗ ಸಂಗೀತಪ್ರೇಮಿಗಳು ಹಿಂದುಸ್ತಾನಿ ಹಾಡುಗಾರಿಕೆಯ ಸವಿಯನ್ನು ಸವಿಯಲು ಇದೊಂದು ಉತ್ತಮ ಅವಕಾಶವಾಗಿತ್ತು. ಅಂದು ಉತ್ತರ ಭಾರತೀಯರಿಗೆ 'ಬೈಸಾಖಿ' ಹೊಸ ವರುಷದ ಸುಗ್ಗಿಯ ಹಬ್ಬವಾದರೆ, ವಿರಾಮದ ಸಂಜೆ ನಾದ ಗಾರುಡಿಗನ ಗಾನಸುಧೆಯನ್ನು ಆಲಿಸಿದ ಸುಖವೇ ಇನ್ನೊಂದು ಹಬ್ಬ.

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಆಯೋಜಿಸಿದ್ದ ಈ ಸಂಗೀತ ಸಂಜೆಯಲ್ಲಿ ಪಂಡಿತ ವೆಂಕಟೇಶ್ ಕುಮಾರ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. 'ದಿ ವೀಕ್' ಸಾಪ್ತಾಹಿಕದ ದಿಲ್ಲಿ ಸ್ಥಾನಿಕ ಸಂಪಾದಕರಾದ ಕೆ.ಎಸ್. ಸಚ್ಚಿದಾನಂದಮೂರ್ತಿ, ದೆಹಲಿಯ ಕರ್ನಾಟಕ ಭವನದ ಸ್ಥಾನಿಕ ಆಯುಕ್ತ ಅತುಲ್ ತಿವಾರಿ, ವಾರ್ತಾ ಇಲಾಖೆಯ ನಿರ್ದೇಶಕ ವಿಶುಕುಮಾರ್ ಅವರು ಪದ್ಮಶ್ರೀ ಪ್ರಶಸ್ತಿ ವಿಜೇತ ಗಾಯಕನನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರೂ ಉಪಸ್ಥಿತರಿದ್ದು ಪದ್ಮಶ್ರೀ ವೆಂಕಟೇಶ್ ಕುಮಾರ್ ಅವರನ್ನು ಪುಷ್ಪಗುಚ್ಛ ಅರ್ಪಿಸಿ ಅಭಿನಂದಿಸಿದರು. ಶ್ರೀಮತಿ ಸವಿತಾ ಇನಾಮಾದಾರ, ಶ್ರೀಮತಿ ಕಲ್ಪನಾ ದೇಶಪಾಂಡೆ ಮತ್ತು ಶ್ರೀ ಸಂಜೀವ್ ದೇಶಪಾಂಡೆ ಅವರೂ ತಮ್ಮ ಅಭಿಮಾನದ ನಾದಗುರುವಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ...ವೇದವನೋದಿ ಹಾರವನಾದ"....ಎಂಬ ಬಸವೇಶ್ವರ ವಚನ, "ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ" ಎಂಬ ಕನಕದಾಸರ ಕೀರ್ತನೆ, "ಒಂದು ಬಾರಿ ಸ್ಮರಣೆ ಸಾಲದೆ" ಆನಂದ ತೀರ್ಥರ, ಪೂರ್ಣಪ್ರಜ್ಞರ... ಎಂಬ ಕೀರ್ತನೆಗಳು ಪ್ರೇಕ್ಷಕರ ಮನಮುಟ್ಟಿದವು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವೆಂಕಟೇಶ ಕುಮಾರ್ ಅವರು ತಮ್ಮೆಲ್ಲ ಸಾಧನೆ, ಯಶಸ್ಸು, ಕೀರ್ತಿಯನ್ನು ತಮ್ಮನ್ನು ರೂಪಿಸಿದ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಸ್ಥಾಪಕ ಗಾನಯೋಗಿ ಪುಟ್ಟರಾಜ ಗವಾಯಿಗಳಿಗೆ ಸಮರ್ಪಿಸಿದರು. "ತೇನ ವಿನಾ ತೃಣಮಪಿ ಚಲತೀ,- ನೀನಿಲ್ಲದೇ ಒಂದು ಹುಲ್ಲುಕಡ್ಡಿಯೂ ಚಲಿಸದು" ಎನ್ನುವಂತೆ ಗುರು ಗಾನಯೋಗಿ ಪುಟ್ಟರಾಜ ಗವಾಯಿಗಳ ಕೃಪೆಯಿಂದಲೆ ತಮಗಿಂದು ಈ ಸನ್ಮಾನ ಲಭಿಸಿದೆ ಎಂದು ತಮ್ಮ ಗುರುಗಳನ್ನು ಮನಃಪೂರ್ವಕವಾಗಿ ನೆನೆದರು.

ಧಾರವಾಡ ಉತ್ತರ ಕರ್ನಾಟಕದ ಸಾಂಸ್ಕತಿಕ ರಾಜಧಾನಿ. ಕನ್ನಡದ ಪಂಪ ಹುಟ್ಟಿದ್ದೂ ಇದೇ ಜಿಲ್ಲೆಯ ಅಣ್ಣಿಗೇರಿಯಲ್ಲಿ. ಕುಮಾರವ್ಯಾಸ, ಕನಕದಾಸ, ಸರ್ವಜ್ಞರಿಂದ ಮೊದಲುಗೊಂಡು ಶಿಶುನಾಳ ಶರೀಫ, ಬೇಂದ್ರೆವರೆಗಿನ ಕಾವ್ಯ-ಸಂಗೀತ-ಸಾಹಿತ್ಯ ಪರಂಪರೆ ಇಲ್ಲಿ ಹರಿದು ಬಂದಿದೆ, ಗುಪ್ತಗಾಮಿನಿ ಶಾಲ್ಮಲಿ ನದಿಯಿಲ್ಲಿ ಜೀವಧಾರೆ. ಇಂಥಹ ಧಾರವಾಡ ಜಿಲ್ಲೆಯ ಲಕ್ಷ್ಮೀಪುರವೆಂಬ ಸಣ್ಣ ಹಳ್ಳಿಯಿಂದ ಬಂದ ವೆಂಕಟೇಶ್ ಕುಮಾರ್ ಬಾಲ್ಯದಲ್ಲಿ ರಂಗಭೂಮಿ ಮತ್ತು ಜನಪದ ಕಲೆಯಲ್ಲಿ ಆಸಕ್ತರಿದ್ದರು. ಕ್ರಮೇಣ ಅವರ ಒಲವು ಸಂಗೀತಕ್ಕೆ ಒಲಿಯಿತು. ಗದುಗಿನ ಪುಟ್ಟರಾಜ ಗವಾಯಿಗಳ ಪುಣ್ಯಾಶ್ರಮದಲ್ಲಿ ಸಂಗೀತ ಸಾಧನೆ ಆರಂಭಿಸಿದರು. ಬೆಳಗಿನ ನಾಲ್ಕಕ್ಕೆ ಅವರ ಸಾಧನೆ ಆರಂಭವಾಗುತ್ತಿತ್ತು. ಪಂಡಿತ್ ಭೀಮಸೇನ್ ಜೋಶಿ ವೆಂಕಟೇಶ್ ಅವರಿಗೆ ಸವಾಯಿ ಗಂಧರ್ವ ಸಂಗೀತ ಮಹೋತ್ಸವದಲ್ಲಿ ಹಾಡಲು ಅವಕಾಶ ನೀಡಿ ಪ್ರೋತ್ಸಾಹಿಸಿದರು. ಆ ನಂತರ ಅವರು ಸಾಧನೆಯ ಹಾದಿಯಲ್ಲಿ ಹಿಂತಿರುಗಿ ನೋಡಲಿಲ್ಲ. ಡಾ. ಗಂಗೂಬಾಯಿ ಹಾನಗಲ್, ಬಸವರಾಜ್ ರಾಜಗುರು, ಮಲ್ಲಿಕಾರ್ಜುನ್ ಮನ್ಸೂರ್, ಸವಾಯಿ ಗಂಧರ್ವ ಮುಂತಾದ ಸಂಗೀತ ದಿಗ್ಗಜರ ನಾಡಿನಿಂದ ಬಂದ ವೆಂಕಟೇಶ್ ಕುಮಾರ್ ಅವರಿಗೆ ಪದ್ಮ ಪ್ರಶಸ್ತಿ ಲಭಿಸಿರುವುದು ಈ ನಾಡಿಗೆ ಸಂದ ಗೌರವ. ಗುರು ಪುಟ್ಟರಾಜ ಗಾವಾಯಿಗಳ ಆಶೀರ್ವಾದದಿಂದ ಎಲ್ಲವೂ ಸಿಕ್ಕಿತು ನನಗೆ ಎಂದು ಮನದುಂಬಿ ನೆನೆದರು. ದೊಡ್ಡವರ ಕೃಪೆ, ಆಶೀರ್ವಾದವೊಂದಿದ್ದರೆ ಏನು ಬೇಕಾದರೂ ಆಗುತ್ತದೆ ಎಂಬುದಕ್ಕೆ ನಾನೇ ಒಂದು ಉದಾಹರಣೆ, "ನೀನೂಲಿದರೆ ಕೊರಡು ಕೊನರುವುದು...ನೀನೊಲಿದರೆ ಬರಡು ಹಯನಹುದು" ಎಂದರು.

ಹಳ್ಳಿಯಿಂದ ಬಂದ ಮಕ್ಕಳಿಗೆ, ದುಡ್ಡು ಕೊಟ್ಟು ಕಲಿಯಲಾಗದ ಮಕ್ಕಳಿಗೆ, ಬಡ ಮಕ್ಕಗಳಿಗೆ ಅಂಗವಿಕಲರಿಗೆ ಪುಟ್ಟರಾಜ ಗವಾಯಿಗಳು ಊಟ-ವಸತಿ ನೀಡಿ ಸಂಗೀತ ಕಲಿಸಿದರು. ಅವರ ನಿಸ್ವಾರ್ಥ ಸೇವೆಯಿಂದ ತಮ್ಮ ಅನ್ನ ತಾವು ಸಂಪಾದಿಸಿಕೊಂಡು ಇಂದು ಸಾವಿರಾರು ಜನರು ಸ್ವಾಭಿಮಾನದಿಂದ ಬದುಕುತ್ತಿದ್ದಾರೆ. ನಾನೂ ಸಹ ಯೂನಿವರ್ಸಿಟಿಯಲ್ಲಿ ನೌಕರಿ ಮಾಡಿದೆ. ಒಂದೂವರೆ ಲಕ್ಷ ರುಪಾಯಿ ಸಂಬಳ ಪಡೆದೆ. ನಮ್ಮಂಥವರಿಗೆಲ್ಲ ಸಾಧ್ಯವಾಗದ್ದು ಗುರುಗಳಿಂದ ಮಾತ್ರ ಸಾಧ್ಯವಾಗುತ್ತೆ. ಇಂತಹ ಗುರುಗುಳು ಇದ್ದಾರೆಂದೇ ದೇಶ ಸಮಾಜ ಇನ್ನೂ ನಡೆದಿದೆ ದೇಶಕ್ಕೇ ದೊಡ್ಡ ಗೌರವ ಅವರು. ಸಾವಿರಾರು ಜನ ಕಣ್ಣಿಲ್ಲದ ಮಕ್ಕಳಿಗೆ ವಿದ್ಯೆ ಕೊಟ್ಟ ಮಹಾತ್ಮರು ಅವರು ಎಂದು ಪುಟ್ಟರಾಜ ಗವಾಯಿಗಳನ್ನು ನೆನೆದರು.

ಈ ಕಾರ್ಯಕ್ರಮಕ್ಕೆ ಖ್ಯಾತ ಸರೋದ್ ವಾದಕ ಬಿಶ್ವಜೀತ್ ರಾಯ್ ಚೌಧರಿ ಆಗಮಿಸಿ ಸಂಗೀತ ಸಂಜೆಯ ಸೊಬಗನ್ನು ಆಸ್ವಾದಿಸಿದ್ದು ಇನ್ನೊಂದು ವಿಶೇಷವಾಗಿತ್ತು. ಅನೇಕ ಸಂಗೀತ ಪ್ರೇಮಿಗಳಲ್ಲದೇ ಗಂಧರ್ವ ಸಂಗೀತ ಶಾಲೆಯ ಸಂಗೀತದ ವಿದ್ಯಾರ್ಥಿಗಳು, ಗುರುಗಳು, ಮಾಧ್ಯಮ ಮಿತ್ರರು ಆಗಮಿಸಿದ್ದರು. ಸರವೂ ಕೃಷ್ಣ ಭಟ್ಟರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ವಾರ್ತಾ ಇಲಾಖೆಯ ನಿರ್ದೇಶಕ ವಿಶುಕುಮಾರ್ ಆಶಯ ನುಡಿಗಳನ್ನಾಡಿದರು. ವಾರ್ತಾ ಇಲಾಖೆಯ ಪ್ರಭಾರ ನಿರ್ದೇಶಕ ಶ್ರೀ ಎಚ್. ಶ್ರೀನಿವಾಸ್ ಅವರು ವಂದನಾರ್ಪಣೆ ಸಲ್ಲಿಸಿದರು. ಅ

***ರೇಣುಕಾ ನಿಡಗುಂದಿ***

## ಅಭಿನಂದನೆ



ಇತ್ತೀಚೆಗೆ ವಿವಾಹಿತರಾದ ಸಂಘದ ಆಜೀವ ಸದಸ್ಯರಾದ ಶ್ರೀ ಕೆ.ಸಿ. ಕಿಶೋರ್ ದಂಪತಿಗಳನ್ನು ಸಂಘದ ವಾರ್ಷಿಕೋತ್ಸವ ಸಮಾರಂಭದ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾದ ಶ್ರೀಮತಿ ಆಶಾ ಹೆಗ್ಡೆ ಅವರು ಹೂಗುಚ್ಛ ನೀಡಿ ಗೌರವಿಸುತ್ತಿರುವುದು.




# ರಾಷ್ಟ್ರದ ರಾಜಧಾನಿಯಲ್ಲಿ ನಾಡಪ್ರಭು ಕೆಂಪೇಗೌಡರ ಸಾಂಸ್ಕೃತಿಕ ಸಂಭ್ರಮ

ಏಪ್ರಿಲ್ 17ರಂದು ನಾಡಪ್ರಭು ಕೆಂಪೇಗೌಡ ಫೌಂಡೇಷನ್, ನವದೆಹಲಿ, ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕೆಂಪೇಗೌಡ ರಾಷ್ಟ್ರೀಯ ಉತ್ಸವವನ್ನು ಆಯೋಜಿಸಿತ್ತು. ರಾಷ್ಟ್ರಪ್ರಶಸ್ತಿ ಪುರಸ್ಕೃತ ಚಲನಚಿತ್ರ ನಿರ್ದೇಶಕರಾದ ಶ್ರೀ ಟಿ.ಎಸ್. ನಾಗಾಭರಣ ಅವರು ದೀಪ ಬೆಳಗಿಸಿ ಈ ರಾಷ್ಟ್ರೀಯ ಉತ್ಸವವನ್ನು ಉದ್ಘಾಟಿಸಿದರು. ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್, ಡಿ.ಸಿ.ಪಿ., ನವದೆಹಲಿ, ಬೆಂಗಳೂರಿನ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಶ್ರೀ ಅ. ದೇವೇಗೌಡ, ಕರ್ಣಶ್ರೀ ಗ್ರೂಫ್‌ನ ಅಧ್ಯಕ್ಷರಾದ ಶ್ರೀ ಆರ್. ಶಿವಕುಮಾರ್ ಗೌಡ ಹಾಗೂ ಬಿ.ಜೆ.ಪಿ. ಮುಖಂಡರುಗಳಾದ ಶ್ರೀ ಎಚ್.ಡಿ. ರಾಜೇಶ್, ಶ್ರೀ ವೀರಸ್ವಾಮಿ ರೆಡ್ಡಿ, ಅಧ್ಯಕ್ಷರು, ಸಾಯಿ ಮಂದಿರ ಚಾರಿಟೆಬಲ್ ಟ್ರಸ್ಟ್, ಬೆಂಗಳೂರು, ಡಾ. ಸಿ.ಕೆ. ಮೂರ್ತಿ, ಮಾಲೀಕರು, ಸಿ.ಕೆ. ಎಂ.ಎಂಟರ್ ಪ್ರೈಸಸ್, ಶ್ರೀ ರಾಮಾರೆಡ್ಡಿ, ಅಧ್ಯಕ್ಷರು, ಅಖಿಲ ಕರ್ನಾಟಕ ರಂಗಭೂಮಿ ಹಾಗೂ ರಂಗಕರ್ಮಿಗಳ ಒಕ್ಕೂಟ, ಬೆಂಗಳೂರು, ಶ್ರೀ ಮರಿಮಲ್ಲಯ್ಯ, ಪ್ರಧಾನ ಕಾರ್ಯದರ್ಶಿ, ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಾಯಣ್ಣ ಮತ್ತು ಶ್ರೀ ವೈ.ಡಿ. ರವಿಶಂಕರ್, ಅಧ್ಯಕ್ಷರು, ವಿಶ್ವ ಒಕ್ಕಲಿಗರ ಮಹಾ ವೇದಿಕೆ, ಬೆಂಗಳೂರು, ಶ್ರೀ ಶಿವಕುಮಾರ್, ಅಧ್ಯಕ್ಷರು, ಒಕ್ಕಲಿಗರ ಹಿತರಕ್ಷಣಾ ವೇದಿಕೆ ಮೈಸೂರು, ಶ್ರೀ ಎಸ್. ಎಸ್.ಯೋಗೇಶ್, ನಿರ್ದೇಶಕರು, ಜಿಲ್ಲಾ ಒಕ್ಕಲಿಗರ ಸಂಘ ಮೈಸೂರು, ಹಾಗೂ ಬನ್ನೂರು ಒಕ್ಕಲಿಗ ಗೌಡ ಸಂಘದ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಉದ್ಘಾಟಿಸಲಾದ ಕಾರ್ಯಕ್ರಮ ಜಾನಪದ ಮೆರವಣಿಗೆಯ ಮುಖಾಂತರ ದೆಹಲಿ ಕರ್ನಾಟಕ ಸಂಘದ ಸಭಾಂಗಣಕ್ಕೆ ಬಂದು, ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಮೆರುಗು, 'ಕರುನಾಡ ಸಾಂಸ್ಕೃತಿಕ ಸಂಭ್ರಮ' ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಅತ್ಯುತ್ತಮವಾಗಿ ಮೂಡಿಬಂತು.

ಸಮಾರಂಭದ ಸಮಾರೋಪಕ್ಕೆ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾ ಸ್ವಾಮೀಜಿ, ಶ್ರೀ ಕ್ಷೇತ್ರ ಆದಿ ಚುಂಚನಗಿರಿ ಮಹಾ ಸಂಸ್ಥಾನ ಪೀಠ, ಕೇಂದ್ರ ಸಚಿವ ಶ್ರೀ ಅನಂತ ಕುಮಾರ್ ಅಲ್ಲದೇ ಕರ್ನಾಟಕದಿಂದ ಬಂದ ಸುಮಾರು 200ಕ್ಕೂ ಹೆಚ್ಚು ಗಣ್ಯಾತಿ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್ ಅವರು ಮಾತನಾಡುತ್ತ ಬೃಹತ್ತಾಕಾರವಾಗಿ ಬೆಳೆದ ಈ ಬೆಂಗಳೂರನ್ನು ಕಟ್ಟಿದ ಮಹಾಪುರುಷ ನಾಡಪ್ರಭು ಕೆಂಪೇಗೌಡರು ಯಾವುದೇ ಜಾತಿಗಾಗಿ, ಧರ್ಮಕ್ಕಾಗಿ ಮಾತ್ರ ಸೀಮಿತವಾಗಿರಲಿಲ್ಲ, ಅವರ ಹೆಸರಿನಲ್ಲಿ ರೂಪಗೊಂಡಿರುವ ಈ ಫೌಂಡೇಶನ್‌ನ ಮುಖ್ಯ ಧ್ಯೇಯ ಸಾಂಸ್ಕೃತಿಕ, ಸಾಹಿತ್ಯ, ಕ್ರೀಡೆಗಳು ಹಾಗೂ ವಿಶೇಷವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ದೆಹಲಿಗೆ ಬರುವ ಬಡ ವಿದ್ಯಾರ್ಥಿಗಳಿಗೆ ಸಹಕಾರ ಹಾಗೂ ಪ್ರತಿಭಾ ಪುರಸ್ಕಾರ ನೀಡುವುದು ಎಂದು ಅವರು ತಿಳಿಸಿದರು.

ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾ ಸ್ವಾಮೀಜಿ, ಕೇಂದ್ರ ಸಚಿವ ಶ್ರೀ ಅನಂತ ಕುಮಾರ್ ಹಾಗೂ ಆಗಮಿಸಿದ್ದ ಗಣ್ಯರು ಈ ಸಂಸ್ಥೆಗೆ ಶುಭ ಹಾರೈಸಿ, ನಿರಂತರವಾದ ಸಲಹೆ ಮತ್ತು ಸಹಕಾರ ನೀಡುವ ಭರವಸೆಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ಪ್ರೊ. ಕೃಷ್ಣೇಗೌಡರ ಹಾಸ್ಯಸಂಜೆ, ರಾಜ್ಯಪ್ರಶಸ್ತಿ ವಿಜೇತ ಗಾಯಕರಾದ ಶ್ರೀ ಚಿಂತನ್ ವಿಕಾಸ್ ಮತ್ತು ತಂಡದಿಂದ ಗೀತನಮನ, ವಿದ್ವಾನ್ ಕೋಲಾರ್ ರಮೇಶ್ ತಂಡದಿಂದ ಭರತನಾಟ್ಯ ಮತ್ತು ಜಾನಪದ ಶೈಲಿಯ ನೃತ್ಯನಮನ, ಕಾಡುಗೋಡಿ ಶ್ರೀ ಪ್ರಶಾಂತ್ ರೆಡ್ಡಿ ಸಾರಥ್ಯದ ಜನಪದ ವೇದಿಕೆ ತಂಡದಿಂದ ಅದ್ಭುತವಾದ ಡೊಳ್ಳು ಕುಣಿತ ಹಾಗೂ ತಮಟೆವಾದನಗಳನ್ನೊಳಗೊಂಡ ಜಾನಪದ ಕಲಾ ನಮನ ಹಾಗೂ ಇನ್ನಿತರ ಸ್ಥಳೀಯ ಕಲಾ ತಂಡಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಮೂಡಿಬಂದವು.

ಇದೇ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಶ್ರೀ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಈ ಸಾಂಸ್ಕೃತಿಕ ಕಾರ್ಯಕ್ರಮಗಳು ಸುಮಾರು ಎಂಟು ಗಂಟೆಗಳ ಕಾಲ ಮೂಡಿಬಂದು. ದೆಹಲಿಯ ಕರ್ನಾಟಕ ಸಂಘದ ಸಭಾಂಗಣ ತುಂಬಿ ತುಳುಕಿತ್ತು. ಗುರುಗಳ ಆಶೀರ್ವಚನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ಅ

***ಅಭಿಮತ ವರದಿ***














# ಹೊರನಾಡು ಉತ್ಸವ-2016

ಜೆ.ಎನ್.ಯು. ನವದೆಹಲಿ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಎರಡು ದಿನಗಳ ಕಾಲ ನಡೆಯುತ್ತಿರುವ "ಹೊರನಾಡು ಉತ್ಸವ–2016"ನ್ನು ಉದ್ಘಾಟಿಸಿ ಮಾತನಾಡುತ್ತ ಕರ್ನಾಟಕದ ಮಣ್ಣಿನ ವಾಸನೆಯನ್ನು ಹೊತ್ತು ಬಂದ ಈ ನೂರಾರು ಕಲಾವಿದರು ಸಮಾಜದ ಅತ್ಯಂತ ಕೆಳವರ್ಗದವರಾಗಿದ್ದು ತಮ್ಮ ಜೀವನದ ಅನುಭವ ಮತ್ತು ಸಂಕಷ್ಟಗಳನ್ನೇ ತಮ್ಮ ಕಲೆಯ ಮೂಲಕ ವ್ಯಕ್ತಪಡಿಸುವ ಒಂದು ಅದ್ಭುತ ಅವಕಾಶವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಈ ನೈಜ ಕಲಾವಿದರಿಗೆ ಒದಗಿಸಿಕೊಟ್ಟಿರುವುದು ಒಂದು ಶ್ಲಾಘನೀಯವಾದ ಕಾರ್ಯಕ್ರಮವಾಗಿದೆ ಎಂದರು. ತಮಟೆ, ಡೊಳ್ಳು ಕುಣಿತ, ತತ್ವ ಪದಗಳು, ಜಾನಪದ ಗೀತೆಗಳು, ನೃತ್ಯ ಸಂಗೀತ ಹೀಗೆ ಹತ್ತು ಹಲವು ಬಗೆಯ ಕಲಾಪ್ರದರ್ಶನಗಳನ್ನು ತಮ್ಮದೇ ಆದ ಶೈಲಿಯಲ್ಲಿ ನಾಡಿನಾದ್ಯಂತ ಪಸರಿಸಿಕೊಂಡು ಬಂದಿರುವ ಈ ಜನಾಂಗದವರನ್ನು ಗುರುತಿಸಿ ಅವರ ತಂಡವನ್ನು ಕಟ್ಟಿ ದೇಶದ ರಾಜಧಾನಿಯಾದ ದೆಹಲಿಯಲ್ಲಿ ಉತ್ತಮ ಪ್ರದರ್ಶನಗಳನ್ನು ನೀಡಲು ಅವಕಾಶ ಮಾಡಿಕೊಡುತ್ತಿರುವುದು ಕನ್ನಡ ಸಂಸ್ಕೃತಿ ಮತ್ತು ಕಲೆಗೆ ಸರ್ಕಾರ ಮಾಡುತ್ತಿರುವ ದೊಡ್ಡ ಕೊಡುಗೆ ಇದಾಗಿದೆ ಎಂದು ನುಡಿದರು.

ಶ್ರೀ ಅಶೋಕ್ ಚಲವಾದಿ ಜಂಟೀ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರು ಮಾತನಾಡುತ್ತ ಬಾಬಾಸಾಹೇಬ್ ಅಂಬೇಡ್ಕರ್ ಅವರ 125ನೇ ಜನ್ಮೋತ್ಸವದ ಸಂದರ್ಭದಲ್ಲಿ ದೇಶದ ನಾನಾ ಕಡೆಗಳಲ್ಲಿ ಇಂತಹ ತಂಡಗಳನ್ನು ಕೊಂಡೊಯ್ದು ಪ್ರದರ್ಶನ ಏರ್ಪಡಿಸಲಾಗುತ್ತಿದೆ ಎಂದರು.

ಶ್ರೀ ಬಲವಂತರಾವ್ ಪಾಟೀಲ್ ಜಂಟೀ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರು ಮಾತನಾಡುತ್ತ ಈ ಎಲ್ಲ ತಂಡಗಳಲ್ಲಿ ಹೆಚ್ಚು ಹೆಚ್ಚಾಗಿ ಮಹಿಳಾ ಕಲಾವಿದರನ್ನೇ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು ದೆಹಲಿ ಕರ್ನಾಟಕ ಸಂಘ ಅವರು ಮಾತನಾಡುತ್ತ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಿಂದ ಇಂತಹ ಉತ್ತಮ ಕಲೆಯನ್ನು ಹೊತ್ತು ತಂದು ದೆಹಲಿಯಲ್ಲಿ ಕನ್ನಡಿಗರು ಮತ್ತು ಕನ್ನಡೇತರರಿಗೆ ಉಣಬಡಿಸಿದ ಕಲಾವಿದರೆಲ್ಲರಿಗೆ ದೆಹಲಿ ಕರ್ನಾಟಕ ಸಂಘ ಚಿರಋಣಿಯಾಗಿದೆ ಎಂದರು. ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಆಗಮಿಸಿದ ಎಲ್ಲ ಗಣ್ಯರನ್ನು, ಪ್ರೇಕ್ಷಕರನ್ನು ಹಾಗೂ ಕಲಾವಿದರನ್ನು ತುಂಬು ಹೃದಯದಿಂದ ಸ್ವಾಗತಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಾದ ಶ್ರೀ ರಾಜೇಂದ್ರ ಪ್ರಸಾದ್ ಹಾಗೂ ದೆಹಲಿ ಕರ್ನಾಟಕ ಸಂಘದ ಎಲ್ಲ ಪದಾಧಿಕಾರಿಗಳು ಉಪಸ್ಥಿತರಿದ್ದರು.








ತಮಟೆ ವಾದನ, ತತ್ವ ಪದಗಳು, ಜಾನಪದಗೀತೆಗಳು ಭರತ ನಾಟ್ಯ, ಸುಗಮ ಸಂಗೀತ, ಟ್ರಂಪೆಟ್ ವಾದನ, ಇಂತಹ ಹಲವು ಕಾರ್ಯಕ್ರಮಗಳು ತುಂಬಿದ್ದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು.

ಏಪ್ರಿಲ್ 30 ಮತ್ತು ಮೇ 01, 2016ರಂದು ನಡೆಯಲಿರುವ ಈ ಕಾರ್ಯಕ್ರಮ ನಾಳೆ ಇನ್ನೂ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಎಂ, ಹಾಗೂ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನೆರೆದ ಜನರು ಮೆಚ್ಚುವಂತೆ ತುಂಬ ಚೆನ್ನಾಗಿ ನಡೆಸಿಕೊಟ್ಟರು. ಅ

***ಸಖಾರಾಮ ಉಪ್ಪೂರು***



# ಹೊರನಾಡು ಉತ್ಸವ-ಸಮಾರೋಪ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ "ಹೊರನಾಡು ಉತ್ಸವ' ಸಮಾರೋಪ ಸಮಾರಂಭವು ಮೇ 1ರಂದು ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ನರಸಿಂಹ ರಾಜು, ಐ.ಆರ್.ಎಸ್., ಶಿಕ್ಷಣ ಸಂಶೋಧಕ ಶ್ರೀ ಸುಂದರ್ ಕೆನಾಜೆ, ಶ್ರೀ ಅಶೋಕ್ ಚಲವಾದಿ, ಶ್ರೀ ಬಲವಂತ ರಾವ್ ಪಾಟೀಲ್, ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು, ಮತ್ತು ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಶೇಷ ಘಟಕ ಯೋಜನೆಯಡಿ ದೆಹಲಿ ಕರ್ನಾಟಕ ಸಂಘ ಮತ್ತು ಗುರ್‌ಗಾಂವ್‌ನಲ್ಲಿ, ಗುರ್‌ಗಾಂವ್ ಕನ್ನಡ ಸಂಘದ ಸಹಯೋಗದಲ್ಲಿ ಕಾರ್ಯಕ್ರಮವು ಬಹಳ ಅದ್ದೂರಿಯಿಂದ ನಡೆಯಿತು. ಈ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲಾವಿದರಿಗೆ ಒಂದು ಅತ್ಯುತ್ತಮವಾದ ವೇದಿಕೆಯನ್ನು ಒದಗಿಸಿಕೊಟ್ಟ ಅಶೋಕ್ ಚಲವಾದಿಯವರಿಗೆ ಕಲಾವಿದರ ಪರವಾಗಿ ಅಭಿನಂದನೆಯನ್ನು ಸಲ್ಲಿಸಿದರು. ಸಂಘದಲ್ಲಿ ನಿರಂತರವಾಗಿ ಕಾರ್ಯಕ್ರಮಗಳು ನಡೆಯುತ್ತಾ ಇದೆ. ನಾವು ಕರ್ನಾಟಕದಲ್ಲಿಯೇ ಇದ್ದೇವೆ ಎಂಬ ಭಾವನೆ ಮೂಡಿಬರುತ್ತದೆ ಎಂದು ಶ್ರೀ ಬಲವಂತ ರಾವ್ ಪಾಟೀಲ್ ಅವರು ತನ್ನ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ವತಿಯಿಂದ ಈ ಮೊದಲು ನಡೆದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದನ್ನು ನೆನಪಸಿಕೊಳ್ಳುತ್ತಾ ಈ ಆವರಣದ ಒಳಗೆ ಬಂದಾಗೆಲ್ಲ, ಇದು ದೆಹಲಿ ಅಂತಹ ಅನ್ನಿಸುತ್ತಾನೆ ಇರಲಿಲ್ಲ. ಅಚ್ಚ ಕನ್ನಡದ ಬೆಂಗಳೂರಿಗಿಂತಲೂ ಮಿಗಿಲಾದಂತಹ ಪ್ರದೇಶಗಳು ನಮ್ಮಲ್ಲಿವೆ. ಅಂತಹ ಒಂದು ಪ್ರದೇಶದಲ್ಲಿ ನಾವಿದ್ದೇವೆ ಅಂತ ಅನ್ನಿಸಿತ್ತು. ಕನ್ನಡದ ಪರಂಪರೆ ಮೌಖಿಕವಾಗಿ ಬಹಳ ದೊಡ್ಡ ಕೆಲಸವನ್ನು ಮಾಡುತ್ತಾ ಇದೆ. ಸಂಘದಲ್ಲಿ ಯಕ್ಷಗಾನದ ಬಗ್ಗೆ ನಡೆದ ಕಾರ್ಯಕ್ರಮವನ್ನು ನೆನೆದುಕೊಂಡು, ಕಲೆಗಳು ನಮ್ಮ ಭಾಷೆಯನ್ನು ಬೆಳೆಸಿದೆ, ನಮ್ಮ ಸಂಸ್ಕೃತಿಯನ್ನು ಬೆಳೆಸಿದೆ, ಕಲೆ, ಆಚಾರ–ವಿಚಾರ, ನಡೆ–ನುಡಿಗಳನ್ನು ಬೆಳೆಸಿದೆ. ಆದರೆ ಇದು ಎಷ್ಟು ಕಾಲ ಇರುತ್ತದೆ ಎನ್ನುವುದು ದೊಡ್ಡ ಸವಾಲಿನ ವಿಷಯ ಎಂದು ಶ್ರೀ ಸುಂದರ್ ಕೆನಾಜೆ ಅವರು ನುಡಿದರು.

ಶ್ರೀ ನರಸಿಂಹ ರಾಜು ಅವರು ಮಾತನಾಡುತ್ತಾ, ದೆಹಲಿ ಕರ್ನಾಟಕ ಸಂಘವು ಕನ್ನಡ ಸಂಸ್ಕೃತಿ ಮತ್ತು ಜಾನಪದವನ್ನು ಎತ್ತಿ ಹಿಡಿಯುತ್ತಿದೆ. ಇನ್ನೂ ಹೆಚ್ಚು ಹೆಚ್ಚು ಕಾರ್ಯಕ್ರಮವನ್ನು ಮಾಡಲಿ ಎಂದು ಶುಭ ಹಾರೈಸಿದರು. ಶ್ರೀ ಅಶೋಕ್ ಚಲವಾದಿ ಅವರು ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ ರಾಜಧಾನಿ ದೆಹಲಿಯಲ್ಲಿ ಕರ್ನಾಟಕದ 30 ಜಿಲ್ಲೆಗಳ ಜಾನಪದ ಕಲಾ ಪ್ರಕಾರಗಳು, ಊಟ–ತಿಂಡಿಗಳು ದೆಹಲಿಯಲ್ಲಿ ಒಂದು ಕಡೆ ಆಗಬೇಕು ಎಂಬ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು ನುಡಿದರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿದರು. ಅ

*ಅಭಿಮತ ವರದಿ*













# ಗುರ್‌ಗಾಂವ್ ಕನ್ನಡ ಸಂಘದಲ್ಲಿ ಹೊರನಾಡ ಸಾಂಸ್ಕೃತಿಕ ಉತ್ಸವ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಸಹಯೋಗದಲ್ಲಿ ಏಪ್ರಿಲ್ 24ರಂದು ಗುರ್‌ಗಾಂವ್ ಕನ್ನಡ ಸಂಘದ ಆಶ್ರಯದಲ್ಲಿ ಹೊರನಾಡ ಸಾಂಸ್ಕೃತಿಕ ಉತ್ಸವವು ಬಹಳ ಯಶಸ್ವೀಯಾಗಿ ನಡೆಯಿತು.

ಗುರ್‌ಗಾಂವ್ ಕನ್ನಡ ಸಂಘದ ಇತಿಹಾಸದಲ್ಲಿ ಇಂತಹ ಅತಿ ದೊಡ್ಡ ಹಾಗು ಅದ್ಭುತ ಕಾರ್ಯಕ್ರಮ ಮೊದಲ ಬಾರಿಗೆ ನಡೆದಂತಾಗಿದೆ ಎಂದು ಗುರ್‌ಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಡಿ.ವಿ.ಎಸ್. ಮೂರ್ತಿ ಅವರು ಹೇಳಿದರು.

ನೃತ್ಯ ರೂಪಕ–ಶ್ರೀಮತಿ ಲಾವಣ್ಯ ಮತ್ತು ತಂಡ, ಹೊಸಕೋಟೆ, ಸಿತಾರ್ ವಾದನ–ಶ್ರೀ ಎಂ.ಎಸ್ ಪ್ರದೀಪ್ ಕುಮಾರ್ ಮತ್ತು ತಂಡ, ಬೆಂಗಳೂರು, ಜನಪದ ಸಂಗೀತ–ಶ್ರೀ .ಕೆ.ಓ. ಶಿವಣ್ಣ ಮತ್ತು ತಂಡ, ಚಿತ್ರದುರ್ಗ, ರಂಗಸಂಗೀತ–ಶ್ರೀ ಲಕ್ಷ್ಮಿ ನಾರಯಣ ಮತ್ತು ತಂಡ, ಬೆಂಗಳೂರು ಗ್ರಾಮಾಂತರ

ಸೋಮನ ಕುಣಿತ–ಶ್ರೀ ಬಲರಾಮ್ ಮತ್ತು ತಂಡ, ತುಮಕೂರು, ಗೊಂಬೆ ಆಟ–ಶ್ರೀ ಬಿರಾದರ್ ಮತ್ತು ತಂಡ, ಉತ್ತರ ಕನ್ನಡ, ಜಾನಪದ ನೃತ್ಯ–ಶ್ರೀಮತಿ ಮಂಜುಳ ಮತ್ತು ತಂಡ, ಬೆಂಗಳೂರು, ಸಮೂಹ ನೃತ್ಯ–ಹರ್ಷಿತ ಮತ್ತು ತಂಡ, ಕೋಲಾರ, ಶಾಸ್ತ್ರೀಯ ನೃತ್ಯೆ–ಭವ್ಯಶ್ರೀ ಮತ್ತು ತಂಡೆ, ಕೋಲಾರ, ಸೋಬಾನೆ ಪದಗಳು–ಸಮಸ್ಥರು ಹರಪನಹಳ್ಳಿ ಮುಂತಾದ ಕಾರ್ಯಕ್ರಮಗಳನ್ನು ಸುಮಾರು 600ಕ್ಕೂ ಹೆಚ್ಚು ಜನ ವೀಕ್ಷಿಸಿ ಆನಂದಿಸಿದರು. ಪಿಟೀಲು ವಾದನ, ವಚನ ಪದಗಳು, ಸೋಮನ ಕುಣಿತ ಹಾಗೂ ಸೋಬಾನೆ ಹಾಡುಗಳು ಬಹಳ ಜನಮೆಚ್ಚುವಂತಹ ಕಾರ್ಯಕ್ರಮಗಳಾಗಿದ್ದವು.

ಇದೇ ಸಂದರ್ಭದಲ್ಲಿ ಸ್ಥಳೀಯ ಕಲಾವಿದರು ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳೂ ಸಹ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿತು.

ಈ ಕಾರ್ಯಕ್ರಮವನ್ನು ಇಲ್ಲಿ ನಡೆಯಲು ಸಹಾಯ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಾದ ಶ್ರೀ ಕೆ. ದಯಾನಂದ, ನಿರ್ದೇಶಕರು, ಶ್ರೀ ಬಲವಂತ ರಾವ್ ಪಾಟೀಲ ಜಂಟಿ ನಿರ್ದೇಶಕರು, ಶ್ರೀ ಹರಿಕುಮಾರ್, ಸಹಾಯಕ ನಿರ್ದೇಶಕರು ಮತ್ತು ದೆಹಲಿ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಇವರಿಗೆ ಗುರ್‌ಗಾಂವ್ ಕನ್ನಡದ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಕೃಷ್ಣಪ್ಪ ಅವರು ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಸಖಾರಾಮ ಉಪ್ಪೂರು, ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಬಾಬುರಾಜ್ ಪೂಜಾರಿ ಹಾಗೂ ನೂರಾರು ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ರಾಧಾ ಭಟ್ ಅವರು ನಿರೂಪಿಸಿದರು. ಅ

*ಅಭಿಮತ ವರದಿ*











# ಡಾ. ಶಿವಮೂರ್ತಿ ಮುರುಘಾ ಶರಣರ ಶೂನ್ಯಪೀಠಾರೋಹಣದ ಬೆಳ್ಳಿಹಬ್ಬ ಸಮಾರಂಭ



ಬಸವ ಕೇಂದ್ರ, ಶ್ರೀ ಮುರುಘಾ ಮಠ, ಚಿತ್ರದುರ್ಗ ಮತ್ತು ದೆಹಲಿ ಕರ್ನಾಟಕ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರ ಶೂನ್ಯಪೀಠಾರೋಹಣದ ಬೆಳ್ಳಿಹಬ್ಬ ಸಮಾರಂಭದ ಸಮಾರೋಪ ಕಾರ್ಯಕ್ರಮದ ಅಂಗವಾಗಿ "ಶಾಂತಿ ಮತ್ತು ಅಭಿವೃದ್ಧಿಗಾಗಿ ಆಧ್ಯಾತ್ಮ" ಎಂಬ ವಿಷಯ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು 23 ಏಪ್ರಿಲ್ ದೆಹಲಿಯ ಫಿಕ್ಕಿ ಸಭಾಂಗಣದಲ್ಲಿ ನಡೆಯಿತು.

12ನೇ ಶತಮಾನದ ಶರಣ ಸಂಸ್ಕೃತಿ ಪರಂಪರೆಯ ಶೂನ್ಯ ಪೀಠವನ್ನು ಮುಂದುವರಿಸಿಕೊಂಡು ಬರುತ್ತಿರುವ ಡಾ. ಶಿವಮೂರ್ತಿ ಮುರುಘ ಶರಣರು ಶ್ರೀ ಮುರುಘಾ ಮಠ ಚಿತ್ರದುರ್ಗ, ಅವರು ಪೀಠಕ್ಕೆ ಬಂದು 25 ವರ್ಷಗಳು ಸಂದಿದ್ದು ಈ ಅವಧಿಯಲ್ಲಿ ಅವರು ಮಾಡಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಕಾರ್ಯಗಳ ಸ್ಮರಣೀಯವಾಗಿ ಬೆಳ್ಳಿಹಬ್ಬವನ್ನು ಈ ವರ್ಷದಾದ್ಯಂತ ಆಚರಿಸಲಾಗುತ್ತಿದ್ದು, ಫೆಬ್ರವರಿ 20–21ರಂದು ಚಿತ್ರದುರ್ಗದಲ್ಲಿ, ಮಾರ್ಚ್ 26ರಂದು ಬೆಂಗಳೂರಿನಲ್ಲಿ ಮತ್ತು ಸಮಾರೋಪ ಕಾರ್ಯಕ್ರಮವನ್ನು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಏರ್ಪಡಿಸಲಾಯಿತು.

ಡಾ. ಶಿವಮೂರ್ತಿ ಮುರುಘಾ ಶರಣರು, ಶ್ರೀ ಮುರುಘಾ ಮಠ, ಚಿತ್ರದುರ್ಗದಲ್ಲಿ ಭಕ್ತಿ ಭಂಡಾರಿ ಬಸವಣ್ಣನವರ ತತ್ವಗಳು ಮತ್ತು ವಿಚಾರಗಳನ್ನು ಜನಸಾಮಾನ್ಯರಿಗೆ ಹಂಚುತ್ತಾ ಪ್ರತಿವರ್ಷವೂ 'ಶರಣ ಸಂಸ್ಕೃತಿ ಉತ್ಸವ', ಸಮಾಜದ ಗಣ್ಯ ಕಾರ್ಯಕರ್ತರು, ಚಿಂತಕರು ಮತ್ತು ಸುಧಾರಕರನ್ನು ಗುರುತಿಸಿ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ "ಬಸವ ಶ್ರೀ" ಪ್ರಶಸ್ತಿ ನೀಡುತ್ತಾ ಸಮಾಜದಲ್ಲಿ ಹಿಂದುಳಿದ ಮತ್ತು ಬಡ ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ ಸರಳ ಸಾಮೂಹಿಕ ವಿವಾಹಗಳನ್ನು ನಡೆಸುತ್ತಾ, ಅಂತರ್ಜಾತೀಯ ಮತ್ತು ಅಂತರ್‌ಧರ್ಮ ಮತ್ತು ವಿಧವಾ ವಿವಾಹ ಹಾಗೂ ಅನಾಥ ಮತ್ತು ಬಡ ಮಕ್ಕಳನ್ನು 'ಬಸವ ಮಕ್ಕಳು' ಎಂದು ಗುರುತಿಸಿ ಅವರ ಭವ್ಯ ಭವಿಷ್ಯಕ್ಕಾಗಿ ಶ್ರಮಿಸುತ್ತಾ, ಪರಿಸರ ಮತ್ತು ಪ್ರಾಣಿ ಪಕ್ಷಿಗಳ ಸಂರಕ್ಷಣೆಗಾಗಿ ದುಡಿಯುತ್ತಾ, 'ಮುರುಘ ವನ' ಹಾಗೂ ಒಂದು 'ಕಾಯಕ ಗ್ರಾಮ'ವನ್ನು ಸ್ಥಾಪಿಸಿ ಹೀಗೆ ಹತ್ತು ಹಲವು ಮಹಾನ್ ಸಾಮಾಜಿಕ ಪುಣ್ಯದ ಕಾರ್ಯಗಳನ್ನು ಮಾಡುತ್ತಲೇ ಬಂದಿರುತ್ತಾರೆ. ಇಷ್ಟೇ ಅಲ್ಲದೆ, ದೇಶದಲ್ಲಿಯೇ ಅತಿ ಎತ್ತರದ ಬಸವಣ್ಣನವರ 325 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ನಿರ್ಮಾಣ ಮಾಡಲು ಶ್ರಮಿಸುತ್ತಿದ್ದಾರೆ.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೇಂದ್ರ ರಾಜ್ಯ ಮಂತ್ರಿಗಳಾದ ಶ್ರೀ ಜಿ.ಎಂ. ಸಿದ್ದೇಶ್ವರರು ಬೃಹತ್ ಕೈಗಾರಿಗೆ ಹಾಗೂ ಉದ್ದಿಮೆಗಳ ಖಾತೆ ಡಾ. ಶಿವಮೂರ್ತಿ ಮುರುಘಾ ಶರಣರು, ಶ್ರೀ ಮುರುಘಾ ಮಠ, ಚಿತ್ರದುರ್ಗರವರು ರಾಜ್ಯ, ದೇಶ ಮತ್ತು ವಿದೇಶಗಳಲ್ಲಿ ಕ್ರಾಂತಿಕಾರಿ ಬಸವಣ್ಣನವರು ತತ್ವೋಪದೇಶಗಳನ್ನು ಪಸರಿಸುವುದರ ಜೊತೆಗೆ ಎಲ್ಲ ಮೂಢನಂಬಿಕೆಗಳ ವಿರುದ್ಧ ಹೋರಾಡುತ್ತಾ ಸಮಾಜದ ಧೀನ ದಲಿತರು ಮತ್ತು ಬಡ ಬಗ್ಗರಿಗೆ ವಿದ್ಯೆ, ವಸತಿ ಹಾಗೂ ದಾಸೋಹಗಳ ಮೂಲಕ ನಿರಂತರ ಸೇವೆ ಸಲ್ಲಿಸುತ್ತಿರುವುದನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಮಾನ್ಯ ಸಚಿವರು, ಡಾ. ಶಿವಮೂರ್ತಿ ಮುರುಘಾ ಶರಣರ ವಿಶೇಷ ಪುಸ್ತಕವೊಂದನ್ನು ಬಿಡುಗಡೆ ಮಾಡಿ ಮಾತನಾಡುತ್ತಾ ಜಗತ್ತಿಗೆ ಪ್ರಜಾತಂತ್ರ ಮತ್ತು ಲೋಕಸಭೆಯಂತಹ ಮೂಲಭೂತ ವ್ಯವಸ್ಥೆಯನ್ನು ಪ್ರಪ್ರಥಮ ಬಾರಿಗೆ ಅತ್ಯಂತ ಶಿಸ್ತುಬದ್ಧವಾದ ರೀತಿಯಲ್ಲಿ ತಮ್ಮ 'ಅನುಭವ ಮಂಟಪ'ದ ಮೂಲಕ ಪರಿಚಯಿಸಿದ ಬಸವಣ್ಣನವರ ಕೊಡುಗೆ ಅತ್ಯಮೂಲ್ಯವಾದದ್ದು ಎಂದರು.

ಕೇಂದ್ರದ ಮಾಜಿ ಮಂತ್ರಿಗಳು ಹಾಗೂ ಕೋಲಾರ ಲೋಕಸಭಾ ಸದಸ್ಯರಾಗಿರುವ ಶ್ರೀ ಕೆ.ಎಚ್. ಮುನಿಯಪ್ಪ ಅವರು ಮಾತನಾಡುತ್ತಾ, 12ನೇ ಶತಮಾನಗಳಷ್ಟು ಹಿಂದೆಯೇ ಬಸವಣ್ಣನವರು ಸಮಾನತೆ, 'ಕಾಯಕವೇ ಕೈಲಾಸ' ಹಾಗೂ ಸಮಾಜದ ಎಲ್ಲಾ ವರ್ಗಗಳಿಗೆ ಸೇರಿದ ಜನರನ್ನು ಒಗ್ಗೂಡಿಸಿ, ಅವರ ಅನುಭವಗಳನ್ನು ಹಂಚಿಕೊಳ್ಳಲು 'ಅನುಭವ ಮಂಟಪ'ವನ್ನು ನಿರ್ಮಿಸಿದ ಮಹಾ ಮಾನವತಾವಾದಿ, ಅಂತಹ ಅನುಕರಣಾ ಯೋಗ್ಯವಾದ ಎಲ್ಲ ಆಚಾರ ವಿಚಾರಗಳನ್ನು ಇಂದಿನ ಸಮಾಜಕ್ಕೆ ಯಥಾವತ್ತಾಗಿ ನೀಡಲು ಡಾ. ಶಿವಮೂರ್ತಿ ಮುರುಘಾ ಶರಣರು ಸತತ ಪ್ರಯತ್ನ ಮಾಡುತ್ತಿದ್ದಾರೆ ಎಂದು ನುಡಿದರು.

ಚಿತ್ರದುರ್ಗಾ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಬಿ.ಎನ್. ಚಂದ್ರಪ್ಪ ಅವರು ಮಾತನಾಡುತ್ತಾ, ಬಸವಣ್ಣನವರ ವಚನಗಳು ಮತ್ತು ತತ್ವಗಳು, ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ಲಭ್ಯವಿದ್ದಿದ್ದರೆ ಅವರು ಇಂದು ವಿಶ್ವದ ಮಹಾನ್ ತತ್ವಜ್ಞಾನಿಗಳಲ್ಲಿ ಮೊದಲಿಗರೆಂದು ಗುರುತಿಸಲ್ಪಡುತ್ತಿದ್ದರು ಎಂದು ಅಭಿಪ್ರಾಯಪಟ್ಟರು.

ದೆಹಲಿ ಸರಕಾರದ ವಿಶೇಷ ಕಾರ್ಯದರ್ಶಿಗಳಾದ ಶ್ರೀ ಅಮರನಾಥ ತಳವಾಡೆ ಅವರು ಮಾತನಾಡುತ್ತಾ ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಬಸವಣ್ಣನವರ ತತ್ವ ಬೋಧನೆಗಳನ್ನು ದೇಶದಷ್ಟೇ ಅಲ್ಲದೆ ಜಗತ್ತಿನಾದ್ಯಂತ ಪಸರಿಸುವಂತೆ ಮಾಡಲು ಕ್ರಮಕೈಗೊಳ್ಳಬೇಕು ಎಂದು ವಿನಂತಿಸಿಕೊಂಡರು.

ಶ್ರೀ ಮುರುಘಾ ಮಠ ಚಿತ್ರದುರ್ಗ ಹಾಗೂ ದೆಹಲಿ ಕರ್ನಾಟಕ ಸಂಘ, ನವದೆಹಲಿ ಜಂಟಿಯಾಗಿ ಏರ್ಪಡಿಸಿದ್ದ ಈ ಸಮಾರೋಪ ಸಮಾರಂಭಕ್ಕೆ ದೆಹಲಿಯ ಎಲ್ಲಾ ವಿವಿಧ ಕನ್ನಡ ಸಂಘ–ಸಂಸ್ಥೆಗಳು ಸಂಪೂರ್ಣ ಸಹಾಯ ನೀಡಿ ಸಹಕರಿಸಿದ್ದವು.

ಸಮಾರೋಪ ಸಮಾರಂಭದ ಸಾನಿಧ್ಯ ಮತ್ತು ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಶಿವಮೂರ್ತಿ ಮುರುಘಾ ಶರಣರು ಮಾತನಾಡುತ್ತಾ ಭಕ್ತಿ, ಧ್ಯಾನ, ಅನುಭವ, ಕಾಯಕ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿರುವುದಾಗಿ ತಿಳಿಸಿದರು. ತಾವು ಮಾಡುತ್ತಿರುವ ಎಲ್ಲ ಉತ್ತಮ ಕಾರ್ಯಗಳಿಗೆ ಈಗಾಗಲೇ ಸಾವಿರಾರು ಶರಣ ಶರಣೆಯರು ಹಾಗೂ ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಸಾಕಷ್ಟು ಬೆಂಬಲ ದೊರೆಯುತ್ತಾ ಬಂದಿದೆ. ಆದಾಗ್ಯೂ ತಾವು ಹಮ್ಮಿಕೊಂಡಿರುವ ಇನ್ನೂ ಹಲವಾರು ಮಹತ್ವಪೂರ್ಣ ಕಾರ್ಯಕ್ರಮಗಳಿಗೆ ಮುಖ್ಯವಾಗಿ ಬಸವಣ್ಣನವರ ಬೃಹತ್ ಪ್ರತಿಮೆ ನಿರ್ಮಾಣ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಧನ ಸಹಾಯವನ್ನು ಒದಗಿಸಿಕೊಡುವಂತೆ ಮಾನ್ಯ ಮಂತ್ರಿಗಳಾದ ಶ್ರೀ ಜಿ.ಎಂ. ಸಿದ್ದೇಶ್ವರ ಅವರಲ್ಲಿ ವಿನಂತಿಸಿಕೊಂಡರು.

ರಾಜ್ಯದ ವಿವಿಧೆಡೆಗಳಿಂದ ಆಗಮಿಸಿರುವ ಪೂಜ್ಯರುಗಳಾದ ಶ್ರೀ ಗುರುಬಸವ ಮಹಾಸ್ವಾಮಿ, ಶ್ರೀ ಜ್ಞಾನಪ್ರಭು ಸಿದ್ಧರಾಮ ಸ್ವಾಮಿ, ಶ್ರೀ ಶಿವಾನಂದ ಸ್ವಾಮಿ, ಶ್ರೀ ಪ್ರಸನ್ನಾನಂದ ಸ್ವಾಮಿ, ಶ್ರೀ ರುದ್ರಮುನಿ ಸ್ವಾಮಿ, ಶ್ರೀ ಕನಕಪೀಠ ಸ್ವಾಮಿ, ಶ್ರೀ ಪಾಂಡವಮಟ್ಟಿ ಸ್ವಾಮಿಗಳು ಮತ್ತು ಹಲವಾರು ಮಠಾಧಿಪತಿಗಳು, ಸಂತರು, ಈ ಸಂದರ್ಭದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರು ಮಾಡುತ್ತಿರುವ ಅಸಾಧಾರಣ ಸಾಮಾಜಿಕ ಕಾರ್ಯಕ್ರಮಗಳನ್ನು ವಿವರಿಸಿ ಶ್ಲಾಘಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಡಾ. ಕುಂ. ವೀರ ಭದ್ರಪ್ಪ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರು ಮತ್ತು ಅಧಿಕಾರಿಗಳಾದ ಶ್ರೀ ಕೆ.ವಿ. ಪ್ರಭಾಕರ ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ, ಪ್ರೊ. ಈ ಚಿತ್ರಶೇಖರ್, ಶ್ರೀ ಡಿ.ಎಸ್. ಮಲ್ಲಿಕಾರ್ಜುನಪ್ಪ, ಪ್ರೊ. ಶ್ರೀ ಬಸವರಾಜಪ್ಪ, ಪ್ರೊ. ಶ್ರೀ ವಿಶ್ವನಾಥ್, ಡಾ. ಜಯಣ್ಣ, ಶ್ರೀ ಪರಮಶಿವಯ್ಯ ಮುಂತಾದವರು ಉಪಸ್ಥಿತರಿದ್ದರು.

ಶ್ರೀ ವಿ.ವಿ. ಬಿರಾದಾರ ಅವರು ಸ್ವಾಗತಿಸಿದರು, ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮದ ನಂತರ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿಯ ಇನ್ನಿತರ ಕನ್ನಡ ಸಂಘ–ಸಂಸ್ಥೆಗಳ ಸ್ಥಳೀಯ ಕಲಾವಿದರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ನೆರೆದ ಜನರಿಗೆ ಮನೋರಂಜನೆಯನ್ನುಂಟು ಮಾಡಿದರು. ಅ


*ಅಭಿಮತ ವರದಿ*

# ಡಾ. ಅವನೀಂದ್ರನಾಥ್ ರಾವ್ ಅವರ ಸಂಸ್ಕೃತಿ ಸಂವೇದ

ಭಾರತ ಸರಕಾರದ ಸಂಸ್ಕೃತಿ ಸಚಿವಾಲಯಕ್ಕೆ ಸೇರಿದ ಕೇಂದ್ರ ಗ್ರಂಥಾಲಯದಲ್ಲಿ ಹಿರಿಯ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿರುವ ಡಾ. ವೈ. ಅವನೀಂದ್ರನಾಥ ರಾವ್ ಅವರು ಹೊರನಾಡ ಕನ್ನಡಿಗರ ಸೃಜನಶೀಲ ಚಟುವಟಿಗೆಗಳಿಗೆ ಒಂದು ಒಳ್ಳೆಯ ಸಂಕೇತ. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಯನ್ನೂ ಪಡೆದಿದ್ದಾರೆ. ಈಗಾಗಲೇ ಸಮಯ ಸಂದರ್ಭ (2007) ಮತ್ತು 'ದೆಹಲಿಯ ಕನ್ನಡ ಜಗತ್ತಿನಲ್ಲಿ' (2016) ಎಂಬೆರಡು ಕೃತಿಗಳನ್ನು ಪ್ರಕಟಿಸಿ, ನಾಡಿನ ವಿಮರ್ಶಕರ ಗಮನವನ್ನು ತನ್ನೆಡೆಗೆ ಸೆಳೆದುಕೊಂಡಿರುವ ಅವರು, 'ರಾಜಧಾನಿಯಲ್ಲಿ ಕರ್ನಾಟಕ' (2006) ಹಾಗೂ 'ನಾನು ಕಂಡ ನನ್ನ ದೇಶ' ಕೃತಿಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಇವೆಲ್ಲವುಗಳ ಜೊತೆಗೆ ಅವರು ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿಯಾಗಿ, ಅಭಿಮತದ ಸಂಪಾದಕ ಮಂಡಳಿಯ ಸದಸ್ಯರಾಗಿ, ದೆಹಲಿ ತುಳು ಸಿರಿಯ ಅಧ್ಯಕ್ಷರಾಗಿ, ವಿವಿಧ ಕಾರ್ಯಕ್ರಮಗಳ ನಿರ್ವಾಹಕರಾಗಿ, ಹೊರನಾಡ ಕನ್ನಡಿಗರ ಚಟುವಟಿಕೆಗಳಿಗೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಕರ್ನಾಟಕದ ನೂರಾರು ಜನರಿಗೆ ಅವರು ದೆಹಲಿಯಲ್ಲಿ ಕುಳಿತು ಬಗೆ ಬಗೆಯ ಸಹಾಯ ಮಾಡಿದ್ದಾರೆ. ಅವರ ಈ ಬಗೆಯ ಕೆಲಸಗಳಿಗೆ ಅವರು ಬೆಂಗಳೂರಿನ ಬಿ.ಎಂ. ಶ್ರೀಕಂಠಯ್ಯ ಪ್ರತಿಷ್ಠಾನದ ಪ್ರಶಸ್ತಿಯನ್ನು ಅರ್ಹವಾಗಿ ಪಡೆದುಕೊಂಡಿದ್ದಾರೆ. ಮೃದು ಮಾತಿನ, ಸ್ನೇಹಶೀಲ ವ್ಯಕ್ತಿತ್ವದ ಡಾ.ರಾವ್ ಅವರು ಇದೀಗ ಸಂಸ್ಕೃತಿ ಸಂವೇದ (2016, ಸಪ್ನ ಬುಕ್ ಹೌಸ್, ಬೆಂಗಳೂರು) ಎಂಬ ಹೆಸರಿನ ವಿಮರ್ಶಾ ಲೇಖನ ಸಂಕಲನವನ್ನು ಹೊರತಂದಿದ್ದಾರೆ. ಈಚೆಗೆ ತೀರಿಕೊಂಡ ಹಿರಿಯ ಸಾಹಿತಿ ಪ್ರೊ. ಸಾ.ಶಿ. ಮರುಳಯ್ಯ ಅವರು ಈ ಕೃತಿಗೆ ಸುದೀರ್ಘವಾದ ಮುನ್ನುಡಿಯೊಂದನ್ನು ಬರೆದು ಪುಸ್ತಕದ ಘನತೆಯನ್ನು ಹೆಚ್ಚಿಸಿದ್ದಾರೆ.

67 ಪುಟಗಳ ಪ್ರಸ್ತುತ ಪುಸ್ತಕದಲ್ಲಿ ಒಟ್ಟು 14 ಲೇಖನಗಳಿವೆ. ಈ ಅಂಶವು ಇಲ್ಲಿನ ಲೇಖನಗಳು ಆಕಾರದಲ್ಲಿ ಕಿರಿದಾಗಿವೆ ಎಂಬುದನ್ನು ತಾವೇ ಸ್ಪಷ್ಟ ಪಡಿಸುತ್ತವೆ. ವಿಚಾರ ಸಂಕಿರಣಗಳಲ್ಲಿ ನಿರ್ದಿಷ್ಟ ಸಮಯಕ್ಕೆ ಒಳಪಟ್ಟು ಪ್ರಬಂಧಗಳನ್ನು ಬರೆದು ಮಂಡಿಸುವಾಗ ಹೀಗಾಗುವುದು ಸಹಜ. ಪತ್ರಿಕೆಗಳಿಗೆ ಬರೆಯುವಾಗಲೂ ಈಗ ಪದಗಳ ಮಿತಿಯನ್ನು ಮುಂಚಿತವಾಗಿಯೇ ತಿಳಿಸುತ್ತಾರಾದ್ದರಿಂದ ಅಲ್ಲಿಯೂ ಲೇಖನಗಳು ಸುದೀರ್ಘವಾಗುತ್ತಿಲ್ಲ. ಈ ಕುರಿತು ಲೇಖಕರು ಪುಸ್ತಕದ ಆರಂಭದಲ್ಲಿ ವಿವರವಾಗಿ ಬರೆದುಕೊಂಡಿದ್ದಾರೆ. 'ಸಂವೇದ ಎಂದರೆ ಅರಿವು. ನಮ್ಮ ಮಹಾಕಾವ್ಯಗಳು ಮತ್ತು ಕನ್ನಡದ ಕೆಲವು ಉತ್ತಮ ಕೃತಿಗಳನ್ನು ಓದಿ ವಿಮರ್ಶಿಸುವ ಅವಕಾಶ ನನಗೆ ಒದಗಿ ಬಂತು. ಈ ಮೂಲಕ ನಮ್ಮ ಸಂಸ್ಕೃತಿಯನ್ನು ಮತ್ತು ಅದರ ಮೌಲಿಕತೆಯನ್ನು ಅರಿಯಲು ನನಗೆ ಸಹಾಯವಾಯಿತು. ಇತಿಹಾಸದ ಅಧ್ಯಯನವೂ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಹಕರಿಸುತ್ತದೆ. ಈ ಕಾರಣದಿಂದ ನನ್ನ ಈ ಬಗೆಯ ಬರಹಗಳನ್ನು ಪ್ರಕಟಿಸುತ್ತಿದ್ದೇನೆ (ಸ್ಮರಣೆ, ಪುಟ–4). ಇದನ್ನು ಗಮನಿಸಿದರೆ, ಡಾ. ಅವನೀಂದ್ರನಾಥ ರಾವ್ ಅವರಿಗೆ ವಿಮರ್ಶೆ ಎಂದರೆ, ನಿರ್ದಿಷ್ಟವಾದ ಒಂದನ್ನು ತಿಳಿಯುವುದು, ಅಥವಾ ಅರ್ಥಮಾಡಿಕೊಳ್ಳುವುದು. ಈ ಬಗೆಯ ಧೋರಣೆಯ ವಿಮರ್ಶಕರು ಮೂಲತಹ ಕಲಾಕೃತಿಯ ಬಗ್ಗೆ ಗೌರವ ಭಾವನೆ ಹೊಂದಿರುತ್ತಾರೆಯೇ ವಿನಾ ಪಕ್ಷವನ್ನು ಒಡೆದು, ಅದರಿಂದ ಸಿಡಿದು ದೂರ ಹೋಗುವುದಿಲ್ಲ. ಒಂದು ಬಗೆಯ ಉದಾರವಾದೀ ಧೋರಣೆಗಳೇ ಇಲ್ಲಿ ಕೆಲಸ ಮಾಡುತ್ತದೆ.

ಈ ಅರ್ಥದಲ್ಲಿ ಡಾ. ರಾವ್ ಅವರದು ಉದಾರವಾದೀ ಧೋರಣೆಯ ವಿಮರ್ಶೆ. ಮೊಯಿಲಿ ಅವರ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯದ ಬಗ್ಗೆ ಬರೆವಾಗ ಅವರು ಮೊಯಿಲಿ ರಾಮಾಯಣವು ಇತರ ರಾಮಾಯಣಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬ ಪ್ರಶ್ನೆ ಹಾಕೊಂಡು, ಅದಕ್ಕೆ ಬೇಕಾದ ಮಾಹಿತಿಗಳನ್ನು ಕಲೆಹಾಕುತ್ತಲೇ ಹೋಗುತ್ತಾರೆ. ಇಲ್ಲಿ ಅವರು ಮೊಯಿಲಿಯವರ ರಾಮನನ್ನು ಸಮಾಜದ ಹಿತಕಾಯುವ ಆದರ್ಶಪುರುಷ ಎಂದು ಸರಿಯಾಗಿಯೇ ಗುರುತಿಸುತ್ತಾರೆ. 'ಜಾತ್ಯತೀತತೆ, ಸ್ತ್ರೀ ಸ್ವಾತಂತ್ರ್ಯ, ಮಾದರಿ ಪ್ರಜಾಪ್ರಭುತ್ವ, ಸಮಾನತೆ ಮತ್ತು ಸತ್ಯದ ಸಾಕ್ಷಾತ್ಕಾರ ಮೊದಲಾದ ಮೌಲ್ಯ ಹಾಗೂ ಆದರ್ಶಗಳ ಸಂಗಮ, ಸಮಕಾಲೀನ ಪ್ರಜ್ಞೆ ಮತ್ತು ಜನಪರ ನಿಲುವಿನೊಂದಿಗೆ ರಚಿಸಿದ ಮೊಯಿಲಿ ರಾಮಾಯಣ ವಿಕಾಸ ಶೀಲ ಧೋರಣೆಯನ್ನು ಹೊಂದಿದೆ (ಪುಟ: 8) ಎಂಬ ಅವರ ಉಪಸಂಹಾರ ಮನೋಜ್ಞವಾಗಿದೆ. ಆದರೆ ಈ ಬಗೆಯ ಮೌಲ್ಯಗಳೇ ಯಾಕೆ ಇಲ್ಲಿ ಹೆಚ್ಚು ಕಾಣಸಿಗುತ್ತವೆ ಎಂಬ ಪ್ರಶ್ನೆಯನ್ನು ಅವರು ಹಾಕಿಕೊಳ್ಳುವುದಿಲ್ಲ.




ವಿಶ್ವಕವಿ ರಬೀಂದ್ರನಾಥ ಠಾಗೋರರ ಪ್ರಖ್ಯಾತವಾದ ಗೀತಾಂಜಲಿಗೆ ನೂರು ತುಂಬಿದಾಗ ಡಾ. ರಾವ್ ಅವರು ಅದರ ಮಹತ್ವವನ್ನು ನೆನಸಿಕೊಂಡು, ಅದನ್ನು ಪರಿಚಯಿಸುವ ಪುಟ್ಟದಾದ ಆದರೆ ತುಂಬ ಮಹತ್ವದ ಲೇಖನವೊಂದನ್ನು ಬರೆದಿದ್ದು ಅದಿಲ್ಲಿ ಸೇರ್ಪಡೆಯಾಗಿದೆ. ಇಂಥ ಲೇಖನಗಳು ದೀರ್ಘವಾದಷ್ಟೂ ಓದುಗರಿಗೆ ಒಳ್ಳೆಯದು. ಮೂರನೇ ಲೇಖನದಲ್ಲಿ ಗಣಪತಿಯ ಮೂಲಕ ಭಾರತೀಯತೆಯನ್ನು ಗುರುತಿಸುವ ಒಳ್ಳೆಯ ಪ್ರಯತ್ನವಿದೆ. ಪುರಾಣ ಪಾತ್ರಗಳನ್ನು ಹೀಗೆ ಸಮಕಾಲೀನಗೊಳಿಸುವ ಪ್ರಯತ್ನ ನಡೆದಷ್ಟೂ ಒಳ್ಳೆಯದು. ನಾಲ್ಕನೇ ಲೇಖನವು ಗಾಂಧೀಜಿಯ ಪ್ರಖ್ಯಾತವಾದ ವಾರ್ಧಾ ಯಾತ್ರೆಯ ಕುರಿತಾಗಿದೆ. ಕನ್ನಡದ ಈ ಕೃತಿ ಇಂಗ್ಲಿಷಿಗೆ ಬಂದಾಗ ಅದನ್ನಿಲ್ಲಿ ಸೊಗಸಾಗಿ ಪರಿಚಯಿಸಲಾಗಿದೆ. ಐದನೇ ಲೇಖನವು ಮುದ್ದಣನ ರಾಮಾಶ್ವಮೇಧದ ಕುರಿತಾಗಿದ್ದು, ಮುದ್ದಣನ ಹುಟ್ಟೂರಾದ ನಂದಳಿಕೆಯನ್ನು ಶ್ರೀ ಬಾಲಚಂದ್ರರಾಯರು ಬೆಳೆಸಿದ ರೀತಿಗೆ ಮೆಚ್ಚುಗೆ ಪ್ರಕಟಪಡಿಸಿ ಮುಕ್ತಾಯವಾಗುತ್ತದೆ. ಆರನೇ ಲೇಖನವು ಡಿ.ಎಸ್. ಕರ್ಕಿ ಅವರು ಕನ್ನಡ ರಾಷ್ಟ್ರೀಯತೆಯನ್ನು ಉದ್ದೀಪನಗೊಳಿಸಿದ ಬಗೆಯನ್ನು ವಿವರಿಸುವ ತುಂಬಾ ಉಪಯುಕ್ತವಾದ ಲೇಖನ. ಏಳನೇ ಲೇಖನದಲ್ಲಿ ಲೋಕಪ್ರಿಯ ಕವಿಗಳಾದ ಸರ್ವಜ್ಞ ಮತ್ತು ತಿರುವಳ್ಳುವರ್ ಅವರನ್ನು ಹೊಸ ಬಗೆಯಲ್ಲಿ ಪರಿಚಯಿಸಲಾಗಿದೆ, ಅದರಲ್ಲೂ ಸರ್ವಜ್ಞನನ್ನು ಲೇಖಕರು ತಮ್ಮ ಅನುಭವದ ಮೂಲಕವೇ ವಿವರಿಸಿದ್ದು ಮನೋಜ್ಞವಾಗಿದೆ. ಎಂಟನೇ ಲೇಖನವು ಕುವೆಂಪು ಸಾಹಿತ್ಯದ ಅನನ್ಯತೆಯನ್ನು ಗುರುತಿಸಲು ಪ್ರಯತ್ನಿಸಿದರೆ, ಒಂಬತ್ತನೇ ಲೇಖನವು ಬೇಂದ್ರೆ ಅವರ ಕಾವ್ಯಾಭಿವ್ಯಕ್ತಿಯ ಬಗೆಗೆ ಬೆಳಕು ಚೆಲ್ಲುತ್ತದೆ. ಹತ್ತನೇ ಲೇಖನವು ಮಾಸ್ತಿಯರ ನಂಬಿಕೆ ಮತ್ತು ಆದರ್ಶಗಳನ್ನು ಅವರ ಸಾಹಿತ್ಯದ ಮೂಲಕವೇ ಗುರುತಿಸುತ್ತದೆ. 11ನೇ ಲೇಖನವು ಕರ್ನಾಟಕದ ಇತಿಹಾಸದ ಪ್ರಮುಖ ಹೆಜ್ಜೆ ಗುರುತುಗಳನ್ನು ಸಂಕ್ಷಿಪ್ತವಾಗಿ ನಮ್ಮ ಮುಂದಿಡುತ್ತದೆ. 12ನೇ ಲೇಖನವು ಲೇಖಕರ ಹುಟ್ಟೂರಾದ ಉಡುಪಿಯ ವಿಸಿಷ್ಟತೆಗಳನ್ನು ದಾಖಲಿಸುತ್ತದೆ. 13ನೇ ಲೇಖನವು ದಸರಾ ಹಬ್ಬದ ಮಹತ್ವವನ್ನು ಸಾರಿದರೆ, ಕೊನೆಯ ಲೇಖನವು ಇತರ ಎಲ್ಲ ಲೇಖನಗಳಿಗಿಂತ ಭಿನ್ನವಾಗಿ ಯಕ್ಷಗಾನದ ಹಿರಿಯ ಕಲಾವಿದರಾಗಿದ್ದ ಕುರಿಯ ವಿಠಲ ಶಾಸ್ತ್ರಿಗಳನ್ನು ನೆನೆಸುತ್ತಾ ಕಲೆಯ ಸುಧಾರಣೆಯ ಮೇಲೆ ಬೆಳಕು ಚೆಲ್ಲುತ್ತದೆ.

ಹೀಗೆ ಡಾ. ಅವನೀಂದ್ರನಾಥ ರಾವ್ ಅವರ ಈ ವಿಮರ್ಶಾ ಪುಸ್ತಕವು ಅನೇಕ ವಿಷಯಗಳ ಮೇಲೆ ಗಮನ ಹರಿಸುತ್ತದೆ. ಸಾಹಿತ್ಯ, ಇತಿಹಾಸ ಮತ್ತು ಕಲೆ ಅವರ ಚರ್ಚೆಯ ಕೇಂದ್ರದಲ್ಲಿ ಸದಾ ಕ್ರಿಯಾಶೀಲವಾಗಿರುತ್ತದೆ. ವಿಷಯಗಳನ್ನು ಹೆಚ್ಚು ಗೋಜಲುಗೊಳಿಸದೆ, ಸರಳವಾದ ಭಾಷೆಯಲ್ಲಿ ವಿಷಯಗಳನ್ನು ಮಂಡಿಸುವ ಅವರ ಬರೆಹದ ಕ್ರಮವೂ ಆಹ್ಲಾದಕರವಾಗಿದೆ.

ಕನ್ನಡವಿಲ್ಲದ ಊರಿನಲ್ಲಿ ಕುಳಿತುಕೊಂಡು ಕನ್ನಡದ ಬಗ್ಗೆ ಬರೆಯುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಅದನ್ನು ಒಂದು ಬಗೆಯ ನಿಷ್ಠೆ ಮತ್ತು ಬದ್ಧತೆಯಿದ್ದಾಗ ಮಾತ್ರ ಮಾಡಲು ಸಾಧ್ಯ. ಇದಕ್ಕಾಗಿ ನಾನು ಲೇಖಕರನ್ನು ಅಭಿನಂದಿಸುತ್ತೇನೆ. ಅ


*ಡಾ. ಪುರುಷೋತ್ತಮ ಬಿಳಿಮಲೆ*



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರು ಇದೇ ಏಪ್ರಿಲ್ 18ರಂದು ರಾಮನವಮಿಯನ್ನು ಆಚರಿಸಿದರು. ಮಹಿಳೆಯರೆಲ್ಲರೂ ಸೇರಿ ಸುಂದರವಾಗಿ ರಂಗೋಲಿ, ಹೂಹಾರಗಳಿಂದ ಶ್ರೀರಾಮ ಚಿತ್ರಪಟವನ್ನು ಆಲಂಕರಿಸಿದ್ದರು. ಅಲ್ಲದೇ ತಮ್ಮ ಸ್ವಹಸ್ತದಿಂದ ಮನೆಯಿಂದಲೇ ಪ್ರಸಾದವನ್ನು ತಯಾರಿಸಿ ತಂದು ಭಜನೆ ಹಾಗೂ ಹಾಡುಗಳನ್ನು ಹಾಡುವ ಮುಖಾಂತರ ಶ್ರೀರಾಮನ ಗುಣಗಾನ ಮಾಡಿದರು. ತಮ್ಮ ಸ್ವಂತ ಕೆಲಸದ ಮೇಲೆ ದೆಹಲಿಗೆ ಆಗಮಿಸಿದ್ದ ಕನ್ನಡ ಸಿನಿಮಾ ನಿರ್ದೇಶಕರು ಹಾಗೂ ರಂಗಭೂಮಿ ಕಲಾವಿದರಾದ ಶ್ರೀ ನಾಗಾಭರಣ ಅವರು ಅಸೋಸಿಯೇಶನ್ ಸದಸ್ಯೆಯರ ಆಹ್ವಾನ ಸ್ವೀಕರಿಸಿ ರಾಮನವಮಿ ಆಚರಣೆಯಲ್ಲಿ ಭಾಗವಹಿಸಿದ್ದರು. ಅ

*ದೀನಾಜಾಯ್ಸ್*

## ಜಯಪ್ರಕಾಶ್ ಬೆಂಗೇರಿ ಅವರಿಗೆ ಶ್ರದ್ಧಾಂಜಲಿ



ಶ್ರೀ ಜಯಪ್ರಕಾಶ್ ಬೆಂಗೇರಿ ಅವರು ದೆಹಲಿ ಕರ್ನಾಟಕ ಸಂಘದ ಎಲ್ಲಾ ಚಟುವಟಿಕೆ ಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಮತ್ತು ಸಂಘದ ಆಜೀವ ಸದಸ್ಯರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದ ಜಯಪ್ರಕಾಶ್ ಬೆಂಗೇರಿ ಅವರು 11 ಏಪ್ರಿಲ್ 2016ರಂದು ನಮ್ಮನ್ನಗಲಿದರು.

ಅವರ ಸ್ಮರಣಾರ್ಥ ಇದೇ ಏಪ್ರಿಲ್ 16ರಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿತ್ತು. ಈ ಸಭೆಯಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಹಲವಾರು ಗಣ್ಯ ದೆಹಲಿ ಕನ್ನಡಿಗರು ಅವರ ಕನ್ನಡಪರ ಆಸಕ್ತಿ ಹಾಗೂ ಕರ್ನಾಟಕ ಸಂಘ, ಕನ್ನಡ ಶಾಲೆ ಮತ್ತು ಕನ್ನಡ ಸಂಸ್ಕೃತಿ ಕಲೆಗಾಗಿ ಅವರು ನೀಡಿದ ಕೊಡುಗೆಯನ್ನು ಮನಸಾರೆ ನೆನಪಿಸಿಕೊಂಡರು. ಮಯೂರ್ ವಿಹಾರ್‌ದ 'ತ್ರಿವೇಣಿ ಕನ್ನಡ ಸಾಂಸ್ಕೃತಿಕ ಸಂಘ'ದಲ್ಲಿ ಸಕ್ರಿಯವಾಗಿದ್ದುಕೊಂಡು ಹಲವಾರು ಕನ್ನಡ ನಾಟಕ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕೂಡಾ ಭಾಗವಹಿಸಿದ್ದಾರೆ. ನೇರ ನಡೆನುಡಿಯ ಮತ್ತು ಸದಾ ನಗುಮುಖದವರಾಗಿದ್ದ ಜಯಪ್ರಕಾಶ್ ಬೆಂಗೇರಿ ಅವರು ಎಲ್ಲಾ ಕನ್ನಡಿಗರ ಸ್ನೇಹ ಗೆದ್ದಿದ್ದರು. ಲಲಿತಾ ಅಕಾಡೆಮಿಯಲ್ಲಿ ಲೈಬ್ರೇರಿಯನ್ ಆಗಿ ಸೇವೆ ಸಲ್ಲಿಸಿದ್ದರು. ಇತ್ತೀಚೆಗಷ್ಟೆ ನಿವೃತ್ತಿ ನಂತರ ತಮ್ಮ ತವರೂರಿಗೆ ಮರಳಿದ್ದ ಬೆಂಗೇರಿ ಅವರು ಕಳೆದ ತಿಂಗಳಷ್ಟೇ ಸಂಘದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರು. ಅ

*ಅಭಿಮತ ವರದಿ*

## ಅಭಿನಂದನೆ



ದಿವ್ಯ ಹಿಮಾಚಲ್‌ನ ಮಿಸ್ ಹಿಮಾಚಲ್ ಹಾಗೂ ಟೈಮ್ಸ್ ಮಿಸ್ ಇಂಡಿಯಾ ಜಂಟಿಯಾಗಿ ಏರ್ಪಡಿಸಿದ್ದ 2016ನೇ ಸಾಲಿನ ಸ್ಪರ್ಧೆಯಲ್ಲಿ, ದೆಹಲಿ ಒಕ್ಕಲಿಗ ಗೌಡ ಸಂಘದ ಮಾಜಿ ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘದ ಕಾವಲು ಸಮಿತಿಯ ಸದಸ್ಯರೂ ಆಗಿರುವ ಶ್ರೀ ಎನ್.ಎ. ಮಾಧವ ಹಾಗೂ ಸಂಘದ ಕಾರ್ಯಕಾರಿ ಸಮಿತಿಯ ವಿಶೇಷ ಆಹ್ವಾನಿತ ಸದಸ್ಯೆಯಾಗಿರುವ ಶ್ರೀಮತಿ ಸರೋಜಾ ಮಾಧವ ಅವರ ಸುಪುತ್ರ ಶ್ರೀ ಎನ್. ಎಂ. ಸನ್ಮಾನ್ ಗೌಡ ಅವರಿಗೆ 'Celebrity Choreographer' ಪ್ರಶಸ್ತಿ ಲಭಿಸಿದೆ. ಅ

*ಅಭಿಮತ ವರದಿ*


**SAUJANYA** PRINTING PRESS

A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್

ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
May -2016, Vol. No.26, Issue No.8, Price Rs.1/- RNI Regn. No. 53405/91, DL-SW-1/4016/16-18
Printout Date : May 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

You Aspire,
We help you to Realize




KBL Apna Ghar & Car Loan

- For construction of House
- Purchase of ready built house or flat
- Purchase of site and build house
- Renovation / remodeling / extension / addition / repairs to the existing house / flat.
- Loan facility upto 85% for new cars
- Loan facility also available for used cars
- Loan tenure upto 7 years
- Easy Documentation

Call toll free no. 1800 425 1444 or step into your nearest branch for details

Karnataka Bank
Your Family Bank. Across India.

Regd. & Head Office: Mangaluru - 575 002    CIN - L85110KA1924PLC001128    E-mail: info@ktkbank.com Visit us at: www.karnatakabank.com